# ಶಾಲಾ ಜ್ಞಾನೋಕ್ತಿಗಳು


**ಸಂಪಾದಕರು:**

ಬ್ರದರ್ ವಿಕ್ಟರ್ ಕ್ರಾಸ್ತಾ, ಕಪುಚಿನ್



**ಪ್ರಕಾಶಕರು:**

**ಕಪುಚಿನ್ ಪಬ್ಲಿಕೇಶನ್ ಟ್ರಸ್ಟ್, ಬೆಂಗಳೂರು**

**Shala Jnaanokthigalu** (Thoughts for the Day) : Edited by Bro. Victor Crasta, OFM Cap. Principal & Correspondent, Anugraha Church School, Halbarga Post, Bhalki, Bidar – 585 413, India. Published by Capuchin Publication Trust, Mangalore

**II Edition** : January - 2014

**Pages** : viii + 68

**Price** : Rs. 50

**Copy right** : Bro. Victor Crasta, OFM Cap.

**Printed by** : Assisi Press,
Jail Road, Bejai,
Mangalore – 575 003
Ph: 0824-4262816, 0824-2492816

# ಸಂಪಾದಕರ ನುಡಿಮುತ್ತುಗಳು

## (ಎರಡನೇ ಆವೃತ್ತಿಗೆ)

"ಸಿಹಿಯಾಗು ಮಾತಿನಲಿ, ಬೆಳಕಾಗು ಬಾಳಿನಲಿ". ಪ್ರತಿಯೊಬ್ಬ ವಿದ್ಯಾವಂತ ವ್ಯಕ್ತಿಯು ತನ್ನ ದಿನವನ್ನು ದಿನಪತ್ರಿಕೆಯಲ್ಲಿ ಬರುವ ಸೂಕ್ತಿಯನ್ನೊ, ಜ್ಞಾನೋಕ್ತಿಯನ್ನೊ ಓದುವುದರ ಮೂಲಕ ಪ್ರಾರಂಭಿಸುತ್ತಾನೆ. ಇಂತಹ ಜ್ಞಾನೋಕ್ತಿಗಳನ್ನು ಸಂಸ್ಕೃತದಲ್ಲಿ ಸುಭಾಷಿತಗಳು ಎಂದು ಕರೆಯುತ್ತೇವೆ. ಇದು ಧರ್ಮ ಪ್ರಚಾರಕ್ಕೆ ಅಥವಾ ನೀತಿ ಬೋಧನೆಗೆ ಸೀಮಿತವಾಗಿರದೆ, ದಿನನಿತ್ಯದ ಜೀವನಕ್ಕೆ ಅನ್ವಯಿಸುವ ಮುತ್ತಿನಂತಹ ಮಾತುಗಳಿಂದ ಕೂಡಿರುತ್ತದೆ. ಜ್ಞಾನೋಕ್ತಿಗಳು ನಿಸ್ವಾರ್ಥತೆ, ಪ್ರಾಮಾಣಿಕತೆ, ನಯವಿನಯ, ತಾಳ್ಮೆ, ದೀನದಲಿತರಲ್ಲಿ ಅನುಕಂಪ, ಇತ್ಯಾದಿ ಸದ್ಗುಣಗಳನ್ನು ಬೆಳೆಸುತ್ತವೆ. ಸಾಹಿತ್ಯಿಕ ಮಹತ್ವವನ್ನು ಹೊಂದಿರುವ ಈ ಜ್ಞಾನೋಕ್ತಿಗಳು ಓದುಗರ, ಕೇಳುಗರ ಮನಸ್ಸಿನಲ್ಲಿ ವಿಚಾರ ಕ್ರಾಂತಿಯನ್ನುಂಟುಮಾಡುತ್ತವೆ. ಇಂತಹ ನುಡಿಮುತ್ತುಗಳನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಅವರ ವ್ಯಾಸಂಗವು ಸುಗಮವಾಗಿ ಸಾಗುತ್ತದೆ, ಬದುಕು ಹಸನಾಗುತ್ತದೆ.

ಈ ನಿಟ್ಟಿನಲ್ಲಿ ಅನೇಕರ ಅಭಿಪ್ರಾಯ ಹಾಗೂ ಒತ್ತಡದ ಮೇರೆಗೆ ವಿದ್ಯಾರ್ಥಿ ಜೀವನಕ್ಕೆ ಸೂಕ್ತವಾದ ಕೆಲವು ಜ್ಞಾನೋಕ್ತಿಗಳನ್ನು ಸಂಗ್ರಹಿಸಿ ಶಾಲಾ ಜ್ಞಾನೋಕ್ತಿಗಳು ಎಂಬ ಕೈಪಿಡಿಯನ್ನು 2006ರಲ್ಲಿ ಹೊರತರಲಾಯಿತು. ಸುಮಾರು 5000 ಪ್ರತಿಗಳು ಇಷ್ಟರಲ್ಲೇ ಜನಪ್ರಿಯವಾಗಿ ಇದರ ಎರಡನೆಯ ಆವೃತ್ತಿಯನ್ನು ಹೊರತರುವ ಅನಿವಾರ್ಯತೆ ಒದಗಿದೆ. ಈ ಕೈಪಿಡಿಯಲ್ಲಿ ಜನವರಿ ತಿಂಗಳಿಂದ ಡಿಸೆಂಬರ್ ತಿಂಗಳವರೆಗೆ ವರ್ಷದ ಪ್ರತಿಯೊಂದು ದಿನಕ್ಕೆ ಒಂದೊಂದು ಕನ್ನಡ ಹಾಗೂ ಆಂಗ್ಲ ಭಾಷೆಗಳ ಜ್ಞಾನೋಕ್ತಿಗಳನ್ನು ಮುದ್ರಿಸಲಾಗಿದೆ. ಸುಭಾಷಿತಗಳೆಂದು ಕರೆಯಲ್ಪಡುವ ಜ್ಞಾನೋಕ್ತಿಗಳನ್ನು ನಮ್ಮ ಶಾಲೆಯ ಮುಂಜಾನೆಯ ಪ್ರಾರ್ಥನಾ ಸಭೆಯಲ್ಲಿ ಓದಿಸುವುದರ ಮೂಲಕ ಹಾಗೂ ಶಾಲಾ ಸುಭಾಷಿತ ಫಲಕದಲ್ಲಿ ಬರೆಯುವುದರ ಮೂಲಕ ಪ್ರತಿಯೊಬ್ಬ ವಿದ್ಯಾರ್ಥಿಗೂ ಈ ಜ್ಞಾನೋಕ್ತಿಯನ್ನು ತಲುಪಿಸುವುದು ನಮ್ಮ ಶಾಲಾ ಸಿಬ್ಬಂಧಿ ವರ್ಗದ ಪ್ರಯತ್ನವಾಗಿದೆ. ವಿದ್ಯಾರ್ಥಿಗಳು ಜ್ಞಾನೋಕ್ತಿಗಳನ್ನು ಶಾಲಾ ದಿನಗಳಲ್ಲಿ ಮಾತ್ರವಲ್ಲದೇ ರಜಾ ದಿನಗಳಲ್ಲೂ ಓದಿ ತಮ್ಮ ಮನೆಯಲ್ಲಿರುವ ಸರ್ವರಿಗೂ ಹೇಳುವಂತೆ ಪ್ರೇರೇಪಿಸುವುದೇ ಈ ಪ್ರಕಟಣೆಯ

ಉದ್ದೇಶ. ನಮ್ಮ ಶಾಲೆಯ ಪ್ರತಿಯೋರ್ವ ವಿದ್ಯಾರ್ಥಿಯೂ ಈ ಕೈಪಿಡಿಯನ್ನು ಹೊಂದಿರಲೇಬೇಕೆಂಬುದು ನಮ್ಮ ಅಪೇಕ್ಷೆಯಾಗಿದೆ. ಸರಳ ಅರ್ಥವನ್ನು, ಅಗಾಧವಾದ ಜ್ಞಾನವನ್ನು ಹೊಂದಿರುವ ಈ ಹೊತ್ತಿಗೆಯು ಎಲ್ಲಾ ಓದುಗರ, ವಿದ್ಯಾರ್ಥಿಗಳ ಹಾಗೂ ನನ್ನ ನೆಚ್ಚಿನ ಶಿಕ್ಷಕರ ಮನಸೆಳೆದು ಅವರ ಜ್ಞಾನಬಂಡಾರವನ್ನು ಹೆಚ್ಚಿಸಲೆಂದು ಪ್ರಾರ್ಥಿಸುತ್ತೇನೆ.

ಶಾಲಾ ಜ್ಞಾನೋಕ್ತಿಗಳು ಎಂಬ ಈ ಕೈಪಿಡಿಯನ್ನು ಆಮೂಲಾಗ್ರವಾಗಿ ತಿದ್ದಿ, ಸರಿಪಡಿಸಿ ಇದಕ್ಕೆ ಚೆನ್ನುಡಿಯ ರನ್ನಗಳಸವನ್ನಿಟ್ಟು ಅಲಂಕರಿಸಿದ ಡಾ. ಬಿ. ಎಸ್. ತಲ್ವಾಡಿಯವರಿಗೆ ನನ್ನ ಅನಂತಾನಂತ ವಂದನೆಗಳು. ಈ ಕೈಪಿಡಿಗೆ ಬೇಕಾದ ಎಲ್ಲಾ ಜ್ಞಾನೋಕ್ತಿಗಳನ್ನು ಸಂಗ್ರಹಿಸಲು ನೆರವಾದ ನಮ್ಮ ಶಾಲೆಯ ಎಲ್ಲಾ ಶಿಕ್ಷಕ-ಶಿಕ್ಷಕಿಯರಿಗೆ, ಮುಖಪುಟವನ್ನು ಅತೀ ಸುಂದರವಾಗಿ ಬಿಡಿಸಿದ ಶ್ರೀನಿದಿಯವರಿಗೆ ಮತ್ತು ವರ್ಣರಂಜಿತವಾಗಿ ಮುದ್ರಿಸಿದ ಅಸ್ಸಿಸಿ ಪ್ರಿಂಟರ್ಸ್‌ರ ಮಾಲೀಕರೂ ಹಾಗೂ ಸಿಬ್ಬಂಧಿ ವರ್ಗದವರಿಗೆ ನನ್ನ ಧನ್ಯವಾದಗಳು. ಕರ್ನಾಟಕ ಕಪುಚಿನ್ ಪ್ರಾಂತ್ಯದ ಮುಖ್ಯಸ್ಥರಾದ ಅತೀ ವಂದನೀಯ ಗುರು ಡಾಲ್ಫಿ ಪಾಯಸ್‌ರವರು ಉತ್ತಮ ಶೈಲಿಯಲ್ಲಿ ಮುನ್ನುಡಿಯನ್ನು ಬರೆದು, ಈ ಕೈಪಿಡಿಯನ್ನು ಹೊರತರಲು ಹಲವಾರು ರೀತಿಯಲ್ಲಿ ಸಹಕರಿಸಿದ್ದಾರೆ. ಕರ್ನಾಟಕ ಕಪುಚಿನ್ ವಿದ್ಯಾ ಸಂಸ್ಥೆಗಳ ಕಾರ್ಯದರ್ಶಿಗಳಾದ ಫಾದರ್ ಆಲ್ವಿನ್ ಡಾಯಸ್‌ರವರು ಈ ಕೈಪಿಡಿಯನ್ನು ಮುದ್ರಿಸುವ ಹಾಗೂ ಪ್ರಕಟಿಸುವ ಜವಾಬ್ಧಾರಿಯನ್ನು ತಮ್ಮ ಹೆಗಲಮೇಲೆ ಹೊತ್ತಿರುವುದು ಶ್ಲಾಘನೀಯ. ಇವರೆಲ್ಲರಿಗೂ ಭಗವಂತನು ಆಶೀರ್ವದಿಸಲೆಂದು ಹಾರೈಸುತ್ತಾ, ಈ ಶಾಲಾ ಜ್ಞಾನೋಕ್ತಿಗಳು ಎಲ್ಲಾ ಶಾಲೆಯ ವಿದ್ಯಾರ್ಥಿಗಳಿಗೆ ಹಾಗೂ ಶಾಲಾ ಸಿಬ್ಬಂಧಿ ವರ್ಗದವರಿಗೆ ನುಡಿಮುತ್ತಿನ ಕೈಪಿಡಿಯಾಗಲೆಂದು ಸೃಷ್ಟಿ ಕರ್ತ ದೇವರಲ್ಲಿ ಮೊರೆಯಿಡುತ್ತೇನೆ.

**ಬ್ರದರ್ ವಿಕ್ಟರ್ ಕ್ರಾಸ್ತಾ, ಕಪುಚಿನ್**
*ಸಂಪಾದಕರು/ಪ್ರಾಂಶುಪಾಲರು*

**ಅನುಗ್ರಹ ಚರ್ಚ್ ಶಾಲೆ**
**ಹಲಬರ್ಗಾ, ಭಾಲ್ಕಿ, ಬೀದರ್**
**ದಿನಾಂಕ : 25-12-2013**
**ಕ್ರಿಸ್ತ ಜಯಂತಿ**

# ಶಾಲಾ ಜ್ಞಾನೋಕ್ತಿಗಳು
## ಎರಡನೇ ಆವೃತ್ತಿಗೆ ಎರಡು ಮಾತು

2006ರಲ್ಲಿ 'ಶಾಲಾ ಜ್ಞಾನೋಕ್ತಿಗಳು' ಎಂಬ ಹೆಸರಿನಿಂದ ಪ್ರಕಟವಾದ ಕೃತಿರತ್ನದ ಎರಡನೇ ಆವೃತ್ತಿ ಈಗ ಪ್ರಕಟಗೊಂಡಿದೆ. ಕೇವಲ ನಾಲ್ಕೈದು ವರ್ಷಗಳ ಅವಧಿಯಲ್ಲಿ ಇದರ 5000 ಪ್ರತಿಗಳು ಓದುಗರ ಕೈಸೇರಿದ್ದನ್ನು ನೋಡಿದರೆ ಸಾಕು ಈ ಸುಭಾಷಿತ ಮಂಜರಿಯ ಜನಪ್ರಿಯತೆ ತಿಳಿಯುತ್ತದೆ. ಇದರ ಸಂಪಾದಕರನ್ನು ನಾನು ಮೊದಲು ಅಭಿನಂದಿಸುತ್ತೇನೆ. 'ಶಾಲಾ ಜ್ಞಾನೋಕ್ತಿಗಳು' ಎಲ್ಲಾ ವಿದ್ಯಾರ್ಥಿಗಳಿಗೂ ಅತ್ಯಗತ್ಯವಾಗಿ ಬೇಕಾದ ಒಂದು ಸುಧಾಸೂಕ್ತಿಗಳ ಸಂಕಲನ. ಕಪುಚಿನ್ ಸಭೆಗೆ ಸೇರಿದ ಶಿಕ್ಷಣತಜ್ಞ ಬ್ರದರ್ ವಿಕ್ಟರ್‌ಕ್ರಾಸ್ತಾ ಅವರು ಇಂತಹ ಕೃತಿಯ ಅಗತ್ಯವನ್ನು ಮನಗಂಡು ತಮ್ಮ ಸುದೀರ್ಘ ಶಿಕ್ಷಣಕ್ಷೇತ್ರದ ಅನುಭವದಿಂದ ಇಲ್ಲಿನ ಜ್ಞಾನೋಕ್ತಿಗಳನ್ನು ಆರಿಸಿ, ಸಂಗ್ರಹಿಸಿ ಅದಕ್ಕೆ ಇಂಗ್ಲಿಷ್ ಪರ್ಯಾಯ ಸುಭಾಷಿತಗಳನ್ನು ಮಾಸಿಕಾನುಕ್ರಮದಲ್ಲಿ ಸಿದ್ಧಗೊಳಿಸಿ ಬಹುಶ್ರಮದಿಂದ ಸಂಪಾದಿಸಿದ್ದಾರೆ. ಇದು ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ದೊಡ್ಡವರಿಗೂ ಉಪಯುಕ್ತ ಉಪಲಬ್ಧ ಕೃತಿಯಾಗಿದೆ. ವರ್ಷದ 366 ದಿನಗಳಿಗೂ ಆಯಾ ದಿನಗಳ ವಿಶೇಷವನ್ನರಿತು ಒಂದೊಂದು ಸೂಕ್ತಿಗಳನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಅಳವಡಿಸುವುದು ಕಷ್ಟದ ಕೆಲಸ. ವಿಶೇಷದಿನಗಳು, ಹಬ್ಬಹರಿದಿನಗಳು, ಪ್ರಸಿದ್ಧ ವ್ಯಕ್ತಿಗಳ ಹುಟ್ಟುಹಬ್ಬಗಳು–ಇವಕ್ಕೆ ಸಂಬಂಧಿಸಿದ ನುಡಿಮುತ್ತುಗಳನ್ನು ಜಾಗ್ರತೆಯಿಂದ ಅಳವಡಿಸಿದ್ದಾರೆ. ಇನ್ನೂ ಕೊಂಚ ಶ್ರಮವಹಿಸಿ ಆಯಾ ವ್ಯಕ್ತಿವಿಶೇಷ ದಿನಗಳಿಗೆ ಆಯಾ ವ್ಯಕ್ತಿಗಳ ನುಡಿಗಳನ್ನೇ ಅಳವಡಿಸಿದ್ದರೆ ಈ ಸೂಕ್ತಿ ಸುಧಾರ್ಣವ ಕೈಪಿಡಿ ಹೆಚ್ಚು ಅರ್ಥಪೂರ್ಣವಾಗುತ್ತಿತ್ತು. ಅಂತಹ ಕೆಲಸವನ್ನು ಮುಂದಿನ ಆವೃತ್ತಿಗಳಲ್ಲಿ ಮಾಡಿಯಾರು ಎಂಬುದು ನನ್ನ ನಂಬಿಕೆ.

'ಜ್ಞಾನೋಕ್ತಿಗಳು' ಅರಿವಿನ ಉಕ್ತಿಗಳಾಗಿ ವಿದ್ಯಾರ್ಥಿಗಳಿಗೆ ಸುಲಭವಾಗಿ ಎಟಕುತ್ತವೆ. ಈ ಕೈಪಿಡಿಯನ್ನು ಅವರು ತಮ್ಮ ಶಾಲಾ ದಿನಚರಿಯಂತೆ ಜೋಪಾನವಾಗಿ ಇರಿಸಿಕೊಂಡು ಆಯಾ ದಿನಗಳ ಉಕ್ತಿಯನ್ನು ನಾಲ್ಕಾರುಸಾರಿ ಓದಿ, ಮನನಮಾಡಿ

ಅದನ್ನು ಮನದಾಳದಲ್ಲಿ ಸಂಗ್ರಹಿಸಿಟ್ಟುಕೊಂಡರೆ, ಅದು ಅವರ ಜೀವನ ಪರಿಯಂತ ಅವರೊಂದಿಗಿರುವುದೇ ಅಲ್ಲದೆ, ಬೇಕೆಂದಾಗ ಆ ಉಕ್ತಿಗಳನ್ನು ಉಪಯೋಗಿಸಲು ಬರುತ್ತವೆ. ನಮ್ಮ ಜನಪದರು ಗಾದೆ ಮಾತುಗಳನ್ನು ಇತರರಿಂದ ಕೇಳಿ ಕಲಿತುಕೊಂಡು ಸಮಯವರಿತು ಆ ಗಾದೆಗಳನ್ನು ತಮ್ಮ ಮಾತಿನ ಮಧ್ಯದಲ್ಲಿ ಉಪಯೋಗಿಸುತ್ತಾರೆ. ಎಷ್ಟು ಸೊಗಸಾದ ಗಾದೆಗಳನ್ನು ಉಪಯೋಗಿಸುವರೊ ಅಷ್ಟು ಅವರ ಮಾತು ಮಾಧುರ್ಯವಾಗುತ್ತದೆ. ಹಾಗೆಯೇ ವಿದ್ಯಾರ್ಥಿಗಳು ಇಲ್ಲಿನ ಸೂಕ್ತಿಗಳನ್ನು ತಮ್ಮ ಮಾತಿನ ಮಧ್ಯದಲ್ಲಿ ಸೂಕ್ತವರಿತು ಬಳಸಿದರೆ, ಅವರ ಮಾತಿಗೆ ಮಾಧುರ್ಯ ಮಾತ್ರವಲ್ಲ ಮನ್ನಣೆಯೂ ದೊರೆಯುತ್ತದೆ. ಈ ದೃಷ್ಟಿಯಿಂದ ವಿದ್ಯಾರ್ಥಿಗಳು ಇಲ್ಲಿನ ಜ್ಞಾನೋಕ್ತಿಗಳನ್ನು ಪುಸ್ತಕದಿಂದ ಮಸ್ತಕಕ್ಕೇರಿಸಿಕೊಂಡು ತಮ್ಮ ಸಂಭಾಷಣೆಯ ಮಧ್ಯೆ ಬಳಸಿದರೆ ಈ ಕೈಪಿಡಿಗೆ ಸಾರ್ಥಕ್ಯ ಪ್ರಾಪ್ತವಾಗುತ್ತದೆ. ಸಾರ್ವಕಾಲಿಕ ವ್ಯಾಪ್ತಿಯಿಂದ ಎಲ್ಲ ಧರ್ಮದ, ಎಲ್ಲ ರಾಷ್ಟ್ರದ, ಎಲ್ಲ ಜನಾಂಗಗಳೂ ಸುಲಭವಾಗಿ ತಮ್ಮದಾಗಿಸಿಕೊಳ್ಳಬಹುದಾದ ಇಲ್ಲಿನ ನುಡಿಮುತ್ತುಗಳು ಸರ್ವಮಾನ್ಯವಾಗಲಿ. ಕನ್ನಡ ನಾಡಿನ ಪ್ರತಿಯೊಬ್ಬ ವಿದ್ಯಾರ್ಥಿಯ ಕೈಯಲ್ಲಿ ಇದು ಕೇವಲ ನೋಟಕಷ್ಟೇ ಒದಗದೆ ಊಟಕ್ಕೂ ಒದಗುವಂತಾಗಲಿ ಎಂದು ಆಶಿಸುತ್ತೇನೆ.

**ಡಾ.ಬಿ.ಎಸ್.ತಲ್ವಾಡಿ**
*(ಸಾಹಿತಿ ಮತ್ತು ಜಾನಪದ ವಿದ್ವಾಂಸರು)*

**ಬೆಂಗಳೂರು**
**14–11–2013**
**ಮಕ್ಕಳ ದಿನಾಚರಣೆ**

# ಮುನ್ನುಡಿ

"ಚಿಕ್ಕಮಕ್ಕಳನ್ನು ನನ್ನ ಬಳಿಗೆ ಬರಲು ಬಿಡಿ. ಅವರನ್ನು ತಡೆಯಬೇಡಿ; ದೇವರ ಸಾಮ್ರಾಜ ಇಂಥವರದೇ" ಎನ್ನುತ್ತದೆ ಬೈಬಲ್ ಶ್ರೀಗ್ರಂಥ. ಯೇಸುಸ್ವಾಮಿಯವರು ಚಿಕ್ಕಮಕ್ಕಳಿಗೆ ಅತೀ ಪ್ರೀಯರಾಗಿ ಮಕ್ಕಳ ಬೆಳವಣಿಗೆಗೋಸ್ಕರ ಶ್ರಮಪಟ್ಟವರು.  ಬೈಬಲ್‌ನಲ್ಲಿ ಜ್ಞಾನೋಕ್ತಿಗಳು ಎಂಬ ಪುಸ್ತಕದಲ್ಲಿ ಹಲವಾರು ಉಪಯುಕ್ತ ಜ್ಞಾನೋಕ್ತಿಗಳು ನಮಗೆ ದೊರಕುತ್ತವೆ. ಇವು ನಮಗೆ ಹಲವಾರು ರೀತಿಯಲ್ಲಿ ಉತ್ತಮ ಜ್ಞಾನ ಹಾಗೂ ಬೆಳಕನ್ನು ನೀಡುತ್ತವೆ. ಎಲ್ಲಾ ಜ್ಞಾನದ ಮೂಲ ದೇವರೇ ಆಗಿದ್ದಾರೆ. ಒಂದು ಮಗುವಿಗೆ ಜನ್ಮತಾಳಿ, ಬಾಲ್ಯತನವನ್ನು ಕಳೆಯುವಾಗ ಮನೆಯಲ್ಲೇ ದೇವರ ಭಯಭಕ್ತಿಯನ್ನು ಕಲಿಸಿ, ಮಗುವಿನ ವ್ಯಕ್ತಿತ್ವವನ್ನು ರೂಪಿಸುವ ತಾಯಿ, ಮಗುವಿನ ಪ್ರಥಮ ಗುರು. ಬಾಲ್ಯದಲ್ಲಿ ಮಾತ್ರವಲ್ಲ, ಮನುಷ್ಯ ದೊಡ್ಡವನಾಗಿ ಬೆಳೆದಾಗಲು ಮಮತೆಯ ತಾಯಿ ಅವನಿಗೆ ಗುರುವಾಗಿ ಮಾರ್ಗದರ್ಶಿಯಾಗಿ ಮುನ್ನಡೆಸುತ್ತಾಳೆ.

ಮಗುವು ವಿದ್ಯಾಭ್ಯಾಸಕ್ಕಾಗಿ ಶಾಲೆಗೆ ಸೇರಿದ ಮೇಲೆ, ತಾಯಿಯ ಜೊತೆಜೊತೆಯಾಗಿ ಮಗುವಿನ ಬೆಳವಣಿಗೆಯಲ್ಲಿ ಕೈಗೂಡಿಸುವವರು ಶಾಲೆಯ ಶಿಕ್ಷಕ ವೃಂದ. ಶಾಲೆಯು ಮಗುವಿನ ಎರಡನೆಯ ಮನೆಯಾಗಿ ಪರಿವರ್ತನೆಯಾಗುತ್ತದೆ. ವಿದ್ಯಾಭ್ಯಾಸ ಕೇವಲ ಪುಸ್ತಕದ ಜ್ಞಾನಕ್ಕೆ ಸೀಮಿತವಾದರೆ ಅದು ಸಂಪೂರ್ಣ ಜ್ಞಾನಾರ್ಜನೆಯಲ್ಲ.  ಮಗುವಿನಲ್ಲಿ ಮಾನವೀಯ ಮೌಲ್ಯಗಳು, ಪರರ ಬಗ್ಗೆ ಕರುಣೆ ಮತ್ತು ಕಾಳಜಿ, ದೇಶಭಕ್ತಿ ಮತ್ತಿತರ ಮೌಲ್ಯಗಳನ್ನು ಸಿಗುವಂತೆ ಮಾಡುವುದು ಶಿಕ್ಷಣದ ಗುರಿಯಾಗಿದೆ.  ಈ ಮೌಲ್ಯಗಳನ್ನು ಮಗುವಿನಲ್ಲಿ ಬೆಳೆಯುವಂತೆ ಶ್ರಮಿಸುವವನೇ ನಿಜವಾದ ಗುರು.

ಮಗುವನ್ನು ಉತ್ತಮ ದೇಶಭಕ್ತನನ್ನಾಗಿ ಹಾಗೂ ದೈವ ಮತ್ತು ಪರಪ್ರೀತಿಯ ಮೌಲ್ಯಗಳನ್ನೊಳಗೊಂಡ ವ್ಯಕ್ತಿಯನ್ನಾಗಿ ರೂಪಿಸುವ ನಿಟ್ಟಿನಲ್ಲಿ ಬಹು ಕಾಳಜಿಯಿಂದ ನಮ್ಮ ಕಪುಚಿನ್ ಸಭೆಯ ಸಹೋದರ ವಿಕ್ಟರ್ ಕ್ರಾಸ್ತಾರವರು ಕನ್ನಡ ಹಾಗು ಆಂಗ್ಲ ಭಾಷೆಗಳಲ್ಲಿ ರಚಿಸಲ್ಪಟ್ಟ 'ಶಾಲಾ ಜ್ಞಾನೋಕ್ತಿಗಳು' ಕಿರುಹೊತ್ತಿಗೆ ಒಂದು ಅಮೂಲ್ಯವಾದ ಸಂಪತ್ತಾಗಿದೆ. ವರ್ಷದ ಎಲ್ಲಾ 366 ದಿನಗಳಿಗೆ ಸರಿಯಾಗಿ

ಒಂದೊಂದು ಜ್ಞಾನೋಕ್ತಿಯನ್ನು ಹೊಂದಿರುವ ಈ ಕಿರುಪುಸ್ತಕ, ಮಕ್ಕಳ ಕೈಯಲ್ಲಿ ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸುವ ಸಂಪನ್ಮೂಲವಾಗಿ ಮಾರ್ಪಡಲಿ ಎಂದು ಅಪೇಕ್ಷಿಸುತ್ತೇನೆ. ಪ್ರತಿದಿನ ಶಾಲೆಗಳಲ್ಲಿ ಮಾತ್ರವಲ್ಲದೇ ಇತರ ಸ್ಥಳಗಳಲ್ಲಿಯೂ ಈ ಜ್ಞಾನೋಕ್ತಿಗಳನ್ನು ಓದಿ ಶುಭದಿನವನ್ನು ಪ್ರಾರಂಭಿಸಲು ಸರ್ವರಿಗೂ ಒಂದು ದಾರಿದೀಪವಾಗಲೆಂದು ಹಾರೈಸುತ್ತೇನೆ.

ಹಲವಾರು ಓದುಗರ ಬೇಡಿಕೆಯ ಮೇರೆಗೆ "ಶಾಲಾ ಜ್ಞಾನೋಕ್ತಿಗಳು" ಈ ಪುಸ್ತಿಕೆಯ ಎರಡನೆಯ ಆವೃತ್ತಿಯನ್ನು ಹೊರತರಲು ನಿರ್ಧರಿಸಲಾಗಿದೆ. ಮೊದಲ ಆವೃತ್ತಿಯ 5,000 ಪ್ರತಿಗಳಿಗೆ ಉತ್ತಮ ಬೇಡಿಕೆ ಇದ್ದು, ಈ ಎರಡನೆಯ ಪ್ರತಿಗೂ ಹೆಚ್ಚಿನ ಪ್ರಚಾರ ಸಿಗಲೆಂದು ನಮ್ಮ ಪ್ರಾರ್ಥನೆ. ಅತೀ ಕಡಿಮೆ ಬೆಲೆಯಲ್ಲಿ ವಿತರಣೆಯಾಗಲಿರುವ ಈ ಪುಸ್ತಕದ ಮಾರಾಟದಿಂದ ಖರ್ಚು ಕಳೆದು ಉಳಿದ ಹಣವನ್ನು ಬಡಮಕ್ಕಳ ಉಚಿತ ವಿದ್ಯಾಭ್ಯಾಸಕ್ಕಾಗಿ ವ್ಯಯಿಸಲು ನಿರ್ಧರಿಸಿರುವ ಈ ಪುಸ್ತಕದ ಪ್ರಕಾಶಕರ ಉದಾರತೆ ಅನನ್ಯವಾದುದು. ನಮ್ಮೆಲ್ಲಾ ಮಕ್ಕಳು ಈ ಕಿರುಹೊತ್ತಿಗೆಯನ್ನು ತಮ್ಮದಾಗಿಸಿ, ಅದರಲ್ಲಿರುವ ಜ್ಞಾನೋಕ್ತಿಗಳನ್ನು ಓದಿ, ಜೀರ್ಣಿಸಿ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಾಗ, ತಮ್ಮ ದೇಣಿಗೆಯಿಂದ ಬಡಮಕ್ಕಳ ಮುಖದ ಮೇಲೆ ಮಂದಹಾಸ ಬರಿಸಲು ಕಾರಣರಾಗಬೇಕೆಂದು ಕೇಳಿಕೊಳ್ಳುತ್ತೇನೆ. ಬಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಹಕರಿಸುವ ಸರ್ವರನ್ನೂ ಭಗವಂತನು ಆಶೀರ್ವದಿಸಲೆಂದು ನನ್ನ ಪ್ರಾರ್ಥನೆ.

ದಿನಾಂಕ : 14 ನವೆಂಬರ್, 2013
ಮಕ್ಕಳ ದಿನಾಚರಣೆ

**ಫಾದರ್ ಜೋಸೆಫ್ ಡಾಲ್ಫಿ ಪಾಯಸ್, ಕಪುಚಿನ್**
*ಅಧ್ಯಕ್ಷರು, ಕಪುಚಿನ್ ಶಿಕ್ಷಣ ಸಂಸ್ಥೆಗಳು, ಬೆಂಗಳೂರು*

# ಜನವರಿ – January

**ವಾಚನ:– ಮಕ್ಕಳೇ, ನಿಮ್ಮ ತಂದೆಯ ಬೋಧೆಗೆ ಕಿವಿಗೊಡಿ, ನಿಮ್ಮ ತಾಯಿಯ ಉಪದೇಶವನ್ನು ತೊರೆಯದಿರಿ. ಅವು ನಿಮ್ಮ ತಲೆಗೆ ಸುಂದರ ಕಿರೀಟ, ನಿಮ್ಮ ಕೊರಳಿಗೆ ಕಂಠಾಭರಣ. ಮಕ್ಕಳೇ, ಪಾಪಿಗಳ ಪ್ರೇರಣೆಗೆ ಒಪ್ಪಿಗೆ ಕೊಡಲೇಬೇಡಿ, ಅವರು ನಿಮಗೆ ನಮ್ಮೊಡನೆ ಬಾ, ಹೊಂಚುಹಾಕಿ ಹತ್ಯೆ ಮಾಡೋಣ; ಪಾತಾಳಕ್ಕಿಳಿಯುವವರನ್ನು ನರಕ ನುಂಗುವಂತೆ ಅವರನ್ನು ಜೀವಹಸಿತ ಪೂರ್ತಿಯಾಗಿ ಕಬಳಿಸಿಬಿಡೋಣ ಬಾ; ಅಮೂಲ್ಯವಾದ ಸೊತ್ತನ್ನೆಲ್ಲಾ ಕಂಡುಹಿಡಿಯೋಣ; ಕೊಳ್ಳೆಹೊಡೆದು ಮನೆ ತುಂಬಿಸಿ ಕೊಳ್ಳೋಣ ಬಾ; ನಮ್ಮೊಡನೆ ಪಾಲುಗಾರನಾಗಲು ಬಾ; ನಮ್ಮೆಲ್ಲರ ನಿಧಿ ಒಂದೇ ಆಗಿರಲಿ ಎಂದೆಲ್ಲಾ ಹೇಳುವರು. ಆದರೆ ಮಕ್ಕಳೇ, ಅವರೊಡನೆ ಸೇರಬೇಡಿ; ನೀವು ಅವರ ಮಾರ್ಗದಲ್ಲಿ ಹೆಜ್ಜೆಯಿಡಬೇಡಿ. ಜ್ಞಾನವೆಂಬಾಕೆ ಹಾದಿಯಲ್ಲಿ ಕೂಗುತ್ತಾ ಇದ್ದಾಳೆ. ಬೀದಿ ಚೌಕಗಳಲ್ಲಿ ದನಿಗೈಯುತ್ತಾ ಇದ್ದಾಳೆ.**

### *January 1 : World Peace Day*

- ನನಗಾಗಿ ಪ್ರಪಂಚ, ಪ್ರಪಂಚಕ್ಕಾಗಿ ನಾನು ಎನ್ನುವ ಮನೋಭಾವ ಜೀವನವನ್ನು ಶ್ರೇಷ್ಠ ಮಟ್ಟಕ್ಕೆ ಕರೆದೊಯ್ಯುತ್ತದೆ
- ❖ Peace cannot be kept by force; it can only be achieved by understanding

### *January 2*

- ವಿದ್ಯೆಗೆ ಸಮನಾದ ಕಣ್ಣಿಲ್ಲ; ಸತ್ಯಕ್ಕಿಂತ ಮಿಗಿಲಾದ ತಪಸ್ಸಿಲ್ಲ
- ❖ The beginning is the most important part of the work

### *January 3 : Feast of Holy Name of Jesus*

- ಯಾರೇ ಆಗಲಿ ಶ್ರಮ ಪಡದೆ ಸಂಪತ್ತನ್ನು ಪಡೆಯಲು ಸಾಧ್ಯವಿಲ್ಲ
- ❖ Love is patient and kind, never jealous or envious

### *January 4 : World Braille Day*

- ಹೆಚ್ಚು ಮಾತನಾಡುವವರೆಲ್ಲ ಕಡಿಮೆ ವಿಚಾರ ಮಾಡುತ್ತಾರೆ ಹಾಗೂ ಸ್ವಲ್ಪ ಕೆಲಸ ಮಾಡುತ್ತಾರೆ
- ❖ Only those who are trustworthy know how to trust

*January 5*

- ಯಾರಿಗೆ ಆಸೆ ಹೆಚ್ಚಿರುವುದೋ ಅವರು ಸದಾ ಬಡವರೇ ಆಗಿರುತ್ತಾರೆ. ಮನಸ್ಸಿನಲ್ಲಿ ತೃಪ್ತಿಯಿರುವವರು ಯಾವಾಗಲೂ ಧನವಂತರು

❖ Nothing is impossible to a willing heart

*January 6*

- ಅಲ್ಪನಿಗೆ ಅಧಿಕಾರ ಬಂದರೆ ಅವನು ತನ್ನ ಮೆಟ್ಟುಗಳನ್ನು ಕೂಡ ಕನ್ನಡಕ ಹಾಕಿಕೊಂಡೇ ನೋಡಬೇಕೆನ್ನುತ್ತಾನೆ

❖ A pessimist is a person who blows out the candle to see how dark it is

*January 7*

- ಎಷ್ಟಿದೆಯೋ ಅಷ್ಟರಲ್ಲಿ ತೃಪ್ತಿಪಡಬೇಕು. ಆದರೆ ನಾವು ಹೇಗಿದ್ದೇವೋ ಆಗಿರುವುದರಲ್ಲೇ ತೃಪ್ತಿಪಡಬಾರದು

❖ No burden is heavy when everybody lifts it

*January 8 : Death of Galileo Galilee*

- ಜಾಣರಾದವರು ಸತ್ತವರ ಮತ್ತು ಕೈಮೀರಿ ಹೋದ ವಸ್ತುಗಳ ಬಗ್ಗೆ ಎಂದೂ ಚಿಂತಿಸುವುದಿಲ್ಲ; ಆದರೆ ಮೂರ್ಖರು ಅದಕ್ಕಾಗಿ ಬಿಕ್ಕಿ ಬಿಕ್ಕಿ ಅಳುತ್ತಾರೆ

❖ To give happiness to others is a great act of charity

*January 9 : Birth of Haragovinda Khorana – NRI Day*

- ಉತ್ತಮ ಹವ್ಯಾಸ ಮತ್ತು ಅಭಿರುಚಿಗಳು ನಮ್ಮ ಮಾನಸಿಕ ಹಾಗೂ ದೈಹಿಕ ಆರೋಗ್ಯವನ್ನು ಉತ್ತಮವಾಗಿಡುತ್ತವೆ

❖ Forget yourself for others and others will not forget you

*January 10 : 4 Satellites of Jupiter discovered – World Laughter Day*

- ಮಾಣಿಕ್ಯವು ಶ್ರೇಷ್ಠವಾದರೂ ಬಂಗಾರದೊಂದಿಗೆ ಸೇರದಿದ್ದರೆ ಶೋಭಿಸುವುದಿಲ್ಲ

❖ Each of my days is a miracle. I won't waste my day; I won't throw any miracle

*January 11*

- ಬಿರುಗಾಳಿ ಬೀಸುತ್ತಿದ್ದಾಗ ಮಾಡಿದ ಪ್ರಜ್ಞೆಗಳು ಬಿರುಗಾಳಿ ಬೀಸಿ ಹೋದ ಮೇಲೆ ಮರೆತು ಹೋಗುತ್ತವೆ

❖ The right train of thought can take you to a better station if life

***January 12 : National Growth Day, Swami Vivekananda***

- ವಿದೇಶಿ ಭಾಷೆಗಳನ್ನು ತೆಗಳುವವನು ತನ್ನ ಭಾಷೆಯ ಬಗೆಗೂ ಅಜ್ಞಾನಿಯಾಗಿರುತ್ತಾನೆ
- ❖ There are good men everywhere; I only wish they had louder voice

***January 13***

- ಉದ್ಯೋಗ, ಸಾಹಸ, ಧೈರ್ಯ, ಬುದ್ಧಿಶಕ್ತಿ, ಪರಾಕ್ರಮ ಇರುವಲ್ಲಿ ದೇವರು ಕೂಡ ಸಹಾಯ ಮಾಡುವರು
- ❖ Laughter is the sun that drives winter from the human face

***January 14 : Feast of Infant Jesus – Makara Sankranthi***

- ಎಲ್ಲರಿಗಿಂತಲೂ ತಾನೇ ಜಾಣ ಎಂದು ಭಾವಿಸುವವನು ಸುಲಭವಾಗಿ ಮೋಸ ಹೋಗುತ್ತಾನೆ
- ❖ Even a little untruth destroys a man as a drop of poison ruins milk

***January 15 : Army Day***

- ಮೂರ್ಖರ ಸಹವಾಸವು ಅವಿವೇಕ ಪರಂಪರೆಗು, ಸಜ್ಜನರ ಸಹವಾಸವು ಧರ್ಮ ಸಾಧನೆಗು ಕಾರಣವಾಗುತ್ತದೆ
- ❖ Our lives to be beautiful, must be full of thought for others

***January 16***

- ನೋಡಿ ಹೇಳುವುದಕ್ಕಿಂತಲೂ, ಅರಿತು ಹೇಳುವುದು ಯಾವಾಗಲೂ ಮೇಲು
- ❖ It does not matter how successful you are; it really matters how faithful you are

***January 17***

- ನಿಮ್ಮ ಹಾದಿಯಲ್ಲಿ ಯಾರು ಮುಳ್ಳನ್ನು ಚೆಲ್ಲುತ್ತಾರೋ ಅವರ ಹಾದಿಯಲ್ಲಿ ನೀವು ಹೂವನ್ನು ಹರಡಿರಿ
- ❖ If God wants something to be done, He will certainly give us the right means

***January 18***

- ಶಿಕ್ಷಣವು ಬುದ್ಧಿಗೆ ನೆರವು ನೀಡುತ್ತದೆ, ಆದರೆ ಅದು ಬುದ್ಧಿಶಕ್ತಿಯನ್ನು ಒದಗಿಸುವುದಿಲ್ಲ
- ❖ The aim of all spiritual teaching is to make us loving, pure, humble and unselfish

### *January 19 : Birth of James Watt*

- ● ಸಿಟ್ಟು ಬಾರದವನು ಕಡುಮೂರ್ಖ; ಆದರೆ ಸಿಟ್ಟಿಗೇಳದವನು ಕಡುಜಾಣ
- ❖ A great man is always ready to be small

### *January 20*

- ● ಅನೇಕರು ಸಮುದ್ರದ ಗಂಭೀರ ಗರ್ಜನೆಯಂತೆ ಮಾತನಾಡುತ್ತಾರೆ; ಆದರೆ ಅವರ ಜೀವನ ಕೊಳೆತು ನಾರುವ ನೀರಿನ ಗುಂಡಿ
- ❖ To raise the standard of the world, we must raise our own standard

### *January 21*

- ● ಏಳಿ, ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ
- ❖ Arise, awake, stop not till the goal is reached

### *January 22*

- ● ನೀರಿನಿಂದ ಬೆಂಕಿಯನ್ನೂ ಅಂಕುಶದಿಂದ ಆನೆಯನ್ನೂ ಔಷಧದಿಂದ ರೋಗವನ್ನೂ ನಿಯಂತ್ರಿಸಬಹುದು; ಆದರೆ ಮೂರ್ಖನಿಗೆ ಮಾತ್ರ ಮದ್ದಿಲ್ಲ
- ❖ Do not let evil defeat you, instead conquer evil with good

### *January 23 : National Day of Patriotism*

- ● ಅರಳಿದ ಗುಲಾಬಿಯ ಸುವಾಸನೆ ನಮಗೆ ಬೇಕಾಗಿದ್ದರೆ ನಾವು ಅದರ ಮುಳ್ಳಿನ ಚುಚ್ಚುವಿಕೆಯ ನೋವನ್ನು ಸಹಿಸಬೇಕಾಗುತ್ತದೆ
- ❖ The weight of the world falls on those who throw their weight upon it

### *January 24*

- ● ಎಷ್ಟೇ ಹಿತಕರವಾದರೂ ಭವಿಷ್ಯವನ್ನು ನಂಬಬೇಡ; ಕಳೆದು ಹೋದುದರ ಕುರಿತು ಚಿಂತಿಸಬೇಡ. ವರ್ತಮಾನದ ಕರ್ತವ್ಯಗಳನ್ನು ನಿರ್ವಹಿಸು. ಇದೇ ದೇವರ ದಾರಿ
- ❖ God can fill your heart only if it is open and empty

### *January 25 : Tourism Day – India*

- ● ಸ್ವಂತ ಬುದ್ಧಿಯು ಸುಖಕರವಾದುದು; ಗುರು ಬುದ್ಧಿಯು ವಿಶೇಷವಾದುದು
- ❖ If you want to be more efficient, practice focusing 100% on whatever you do

***January 26 : Republic Day – India***

- ಗುಲಾಮಗಿರಿಗೆ ಬಲಿಯಾಗಿ ಅಗೌರವದಿಂದ ಬಾಳುವುದಕ್ಕಿಂತ ಗೌರವವಾಗಿ ಬದುಕಲು ಹೋರಾಡಿ ಸಾಯುವುದೇ ಲೇಸು

❖ Freedom is nothing else but a chance to be better

***January 27 : Anti – Leprosy Day – India***

- ಮಾನವ ತಪ್ಪು ಮಾಡುವುದು ಸಹಜ. ಆದರೆ ತಪ್ಪು ಮಾಡಿದ್ದು ಗೊತ್ತಿದ್ದು ಅದನ್ನು ಒಪ್ಪಿಕೊಳ್ಳಲು ಹಿಂಜರಿಯುವುದು ಅತಿ ದೊಡ್ಡ ತಪ್ಪು

❖ Reputation is what men and women think of us; character is what God and angels know of us

***January 28***

- ನೀವು ಒಳ್ಳೆಯ ಕೆಲಸಗಳನ್ನು ಮಾಡದಿದ್ದರೂ ಚಿಂತೆಯಿಲ್ಲ; ಒಳ್ಳೆಯ ಕೆಲಸಗಳನ್ನು ಮಾಡುವವರನ್ನು ಟೀಕಿಸಬೇಡಿ

❖ Good manners are made up of petty sacrifices

***January 29***

- ಜೀವನದಲ್ಲಿ ಯಾರಿಗೂ ಕೇವಲ ಸುಖವಾಗಲಿ, ದುಃಖವಾಗಲಿ ಇರುವುದಿಲ್ಲ. ಕೆಲಸಲ ದುಃಖ ಬಂದರೆ, ಕೆಲವೊಮ್ಮೆ ಸುಖವು ಬಂದೇ ಬರುತ್ತದೆ

❖ Science says the first word on everything; but the last word on nothing

***January 30 : Non-violence Day, Martyrs' Day – India***

- ಮೊದಲು ನೀನು ಶಾಂತಿಯಿಂದ ಇರು, ನಂತರ ಇತರರಿಗೆ ಶಾಂತಿಯನ್ನು ಒದಗಿಸು

❖ Feed your faith and your fears will starve to death

***January 31***

- ಅನ್ಯಾಯದಿಂದ ಗಳಿಸಿದ ಹಣವು ಹತ್ತು ವರ್ಷ ಉಳಿಯುವುದು; ಹನ್ನೊಂದನೆಯ ವರ್ಷದಲ್ಲಿ ಮೂಲತಃ ಪೂರ್ಣ ನಾಶಹೊಂದುವುದು

❖ Teaching is fulfilled only when interest or quest for learning is present

*****

# ಫೆಬ್ರುವರಿ – February

**ವಾಚನ:– ಮಕ್ಕಳೇ, ನನ್ನ ಮಾತುಗಳನ್ನು ಅಂಗೀಕರಿಸಿ; ನಿಧಿಯಂತೆ ನನ್ನ ವಿಧಿಗಳನ್ನು ಕಾದಿರಿಸಿ. ಜ್ಞಾನದ ಕಡೆಗೆ ಕಿವಿಗೊಡಿ, ವಿವೇಕದ ಕಡೆಗೆ ಮನ ತಿರುಗಿಸಿ. ಬುದ್ಧಿಗಾಗಿ ಮೊರೆಯಿಡಿ, ವಿವೇಕಕ್ಕಾಗಿ ಕೂಗಿಕೊಳ್ಳಿ, ಹಣದಂತೆ ಅದನ್ನು ಹುಡುಕಿ, ನಿಧಿಯಂತೆ ಅದನ್ನು ತಡಕಿ. ಆಗ ಅರಿತುಕೊಳ್ಳುವಿರಿ ದೈವಜ್ಞಾನವನ್ನು. ಜ್ಞಾನ ಉದಯಿಸುವುದು ನಿಮ್ಮ ಹೃದಯದೊಳಗೆ, ತಿಳುವಳಿಕೆ ಬೆಳಗುವುದು ನಿಮ್ಮ ಆತ್ಮದೊಳಗೆ. ಬುದ್ಧಿಯು ನಿಮಗೆ ಕಾವಲಾಗಿರುವುದು, ವಿವೇಕವು ನಿಮ್ಮನ್ನು ಕಾಪಾಡುವುದು. ಹೀಗೆ ದುರ್ಮಾರ್ಗದಿಂದ ತಪ್ಪಿಸಿಕೊಳ್ಳುವಿರಿ, ಮೂರ್ಖ ಮಾತುಗಾರರಿಂದ ಮರೆಯಾಗುವಿರಿ. ಅಂಥವರು ಹಿಡಿಯುವುದು ಕತ್ತಲು ಹಾದಿಯನ್ನು, ತೊರೆದು ಬಿಡುವರು ಸತ್ಯದ ಮಾರ್ಗವನ್ನು. ಅವರು ಸಂತೋಷಿಸುವುದು ಕೇಡನ್ನು ಮಾಡುವುದರಲ್ಲಿ; ಉಲ್ಲಾಸಿಸುವುದು ಕೆಟ್ಟವರ ದುಷ್ಟತನದಲ್ಲಿ, ಅವರ ಮಾರ್ಗ ಅಂಕು, ಅವರ ನಡತೆ ಡೊಂಕು**

### February 1

- ಎಲ್ಲಾ ಮಹಾಕಾರ್ಯಗಳ ಸಾಧನೆಗು ಮೂಲಭೂತವಾದ ದಿವ್ಯ ಸಾಧನೆಯೊಂದಿದೆ, ಅದೇ ಧೈರ್ಯ
- ❖ Friendship does not exist to criticize but to inspire confidence

### *February 2 : Presentation of the Lord*

- ಮಾನವನ ವರ್ತನೆಯಲ್ಲಿ ಅತ್ಯಂತ ಪರಿಣಾಮಕಾರಿಯಾದ ಗುಣವೆಂದರೆ ಕರುಣೆ
- ❖ A wise son makes his father glad, but the foolish one is a pain for his mother

### *February 3*

- ನಿನ್ನ ಹೃದಯದಲ್ಲಿ ಜ್ಞಾನದೀಪವೊಂದನ್ನು ಹೊತ್ತಿಸು, ಅದು ಎಂದೆಂದಿಗೂ ಆರಲಾರದು
- ❖ Wealth got by odd means will diminish; but the fruit of right labour will increase

### *February 4 : Cancer Day*

- ಯಾವುದು ಸುಂದರವೋ ಅದೆಲ್ಲಾ ಒಳ್ಳೆಯದಲ್ಲ, ಆದರೆ ಯಾವುದು ಒಳ್ಳೆಯದೋ ಅದೇ ಸುಂದರ
- ❖ The best time is simply when you do your best work

*February 5*

- ಆಸೆಯಿಂದ ಮನುಷ್ಯ ನೀಚ, ಕುರುಡ, ಅಷ್ಟೇ ಅಲ್ಲ, ಪಶು ಕೂಡಾ ಆಗುತ್ತಾನೆ

❖ If God is for us, who can be against us?

*February 6*

- ಭಕ್ತರಾಗುವವರು ಒಂದು ಮಾತು ನೆನಪಿನಲ್ಲಿಡಬೇಕು. ಆಸ್ತಿಕನಾಗುವುದಕ್ಕಿಂತ ನಾಸ್ತಿಕನಾಗಿರುವುದೇ ಲೇಸು

❖ Choose your friends for what they are and not for what they have

*February 7*

- ಮಾನವನು ಪರಮಾತ್ಮನನ್ನು ಮರೆತು ಭೌತಿಕ ಸುಖದ ಬೆನ್ನು ಹತ್ತಿಹೋಗುವುದರಿಂದಲೇ ಆತನ ದೇಹಕ್ಕೆ ರೋಗ ರುಜಿನಗಳು ಅಂಟಿಕೊಳ್ಳುತ್ತವೆ

❖ The happiness of your life depends upon the quality of your thoughts

*February 8*

- ನಿನಗೆ ತಿಳಿದಿರುವ ವಿಷಯವನ್ನು ಎಂದಿಗೂ ಮರೆಯಬೇಡ; ತಿಳಿಯದಿದ್ದ ವಿಷಯವನ್ನು ತಿಳಿದಿಲ್ಲ ಎಂದು ಒಪ್ಪಿಕೊ, ಅದೆ ಜಾಣತನ

❖ Do not exalt yourself, or you may bring dishonor upon yourself

*February 9*

- ಅಪಾಯದಲ್ಲಿ ಧೈರ್ಯ, ಕಷ್ಟದಲ್ಲಿ ತಾಳ್ಮೆ, ನಷ್ಟದಲ್ಲಿ ಸಹನೆ, ತೊಂದರೆಯಲ್ಲಿ ಶಾಂತಿ, ದುಃಖದಲ್ಲಿ ಸಮಾಧಾನವೇ ಶೀಲದ ಲಕ್ಷಣ

❖ There is nothing stronger in the world than gentleness

*February 10*

- ಮಾನವನು ಮಾಡುವ ಪ್ರತಿಯೊಂದು ಕೆಲಸಕ್ಕೂ ಉಚಿತ ಸಮಯವೊಂದಿದೆ, ಮತ್ತು ಸಮಯಕ್ಕೆ ಆತನು ಮಾಡಬೇಕಾದ ಉಚಿತ ಕೆಲಸವೂ ಒಂದಿದೆ

❖ If you wish to reach the highest, begin at the lowest

*February 11 : International Day of the Sick*

- ಹುಲಿಗೆ ಹುಲ್ಲು ತಿನ್ನುವುದನ್ನು ಕಲಿಸಬಹುದು. ಆದರೆ ಮೂರ್ಖನಿಗೆ ನೀತಿಯನ್ನು ಕಲಿಸುವುದು ಕಷ್ಟಸಾಧ್ಯ

- ❖ When you handle yourself, use your head and while handling others, use your heart

### *February 12 : Holy Childhood Day*

- ● ಗುಣವುಳ್ಳವರ ಸಹವಾಸದಿಂದ ನೀಚರೂ ಗೌರವವನ್ನು ಪಡೆಯುತ್ತಾರೆ
- ❖ Those who respect their father will have long life

### *February 13*

- ● ಅದೃಷ್ಟ ಬಂದಾಗ ಮಾಡಿದರಾಯಿತೆಂದು ಕೆಲಸ ಮಾಡದೆ ಇರಬಾರದು. ಕೆಲಸ ಮಾಡದೆ ಯಾರಿಗೂ ಎಳ್ಳಿನಿಂದ ಎಣ್ಣೆ ಪಡೆಯಲು ಸಾಧ್ಯವಿಲ್ಲ
- ❖ Whoever forsakes and angers his parents will be cursed by God

### *February 14 : Valentine's Day*

- ● ನೀನು ಏನಾಗಬೇಕೆಂದಿರುವೆಯೋ ಅದನ್ನೇ ಕುರಿತು ಯೋಚಿಸುತ್ತಿರು, ಖಂಡಿತವಾಗಿಯೂ ಅದೇ ಆಗುವೆ
- ❖ A stubborn mind will be burdened by troubles

### *February 15*

- ● ಎಲ್ಲಾ ಕೆಲಸವೂ ಬೀಜ ಬಿತ್ತಿದಂತೆ, ಅದು ಬೆಳೆದು ಫಲ ಕೊಡುವುದಲ್ಲದೆ ಮತ್ತೆ ಬೀಜವನ್ನೂ ಒದಗಿಸುತ್ತದೆ
- ❖ While one door closes, another opens, it is we who have to find that door

### *February 16*

- ● ಪ್ರತಿಯೊಬ್ಬನೂ ತನ್ನ ಹಿಂದಿನ ತಪ್ಪುಗಳಿಗೆ ಅನುಭವವೆಂಬ ದೊಡ್ಡ ಹೆಸರನ್ನು ಕೊಡುತ್ತಾನೆ
- ❖ To understand everything is to forgive everything

### *February 17*

- ● ನಾವು ಏನನ್ನು ಹೊಂದಿರುವುದಿಲ್ಲವೊ ಅದಕ್ಕಾಗಿ ನಾವು ಹೆಚ್ಚು ಆಸೆ ಪಡುವುದು ನಮ್ಮ ಹವ್ಯಾಸವಾಗಿದೆ
- ❖ Honour and dishonor both come from speaking

***February 18 : Birth of Galileo Galilee***

- ಕೆಟ್ಟದ್ದನ್ನು ಮಾಡಲು ದಿನಕ್ಕೆ ನೂರು ಅವಕಾಶಗಳು ದೊರಕುತ್ತವೆ. ಆದರೆ ಒಳ್ಳೆಯದನ್ನು ಮಾಡಲು ವರ್ಷಕ್ಕೆ ಒಂದೇ ಅವಕಾಶ ದೊರೆಯುವುದು ಕಷ್ಟ

❖ Never mind failures, rise with fresh vigour each time

***February 19***

- ಮನುಷ್ಯನಿಗೆ ರೂಪ, ರೂಪಕ್ಕೆ ಗುಣ, ಗುಣಕ್ಕೆ ಜ್ಞಾನ, ಜ್ಞಾನಕ್ಕೆ ಕ್ಷಮೆಯೇ ಭೂಷಣವಾದ ಆಭರಣ

❖ The mind of a foolish person is like a broken jar; it can hold no knowledge

***February 20 : World Harmony Day***

- ಪ್ರತಿಭೆ ಎಂಬುದು ತೊಂಭತ್ತೊಂಭತ್ತು ಪಾಲು, ಬೆವರು ಒಂದು ಪಾಲು ಸ್ಫೂರ್ತಿ

❖ If you are obedient to your superiors, your inferiors will obey you

***February 21 : International Mother Language Day***

- ನಿಜವಾಗಿಯೂ ನಿದ್ದೆ ಮಾಡುವವನನ್ನು ಎಬ್ಬಿಸಬಹುದು; ನಿದ್ದೆಯ ನಟನೆ ಮಾಡುವವನನ್ನು ಎಬ್ಬಿಸುವುದು ಕಷ್ಟ

❖ He is the best of all men who follow good advice

***February 22***

- ವಿಪತ್ತುಗಳು ಬರುವುದು ಸಹಜ; ಅವುಗಳನ್ನು ದಿಟ್ಟತನದಿಂದ ಎದುರಿಸುವುದೆ ಗಂಡಸುತನ

❖ If you want to hit the mark, you must aim a little above it

***February 23***

- ನಾವು ಕೆಲಸವನ್ನು ಎಷ್ಟು ಮಾಡುತ್ತೇವೆ ಎಂಬುದು ಮುಖ್ಯವಲ್ಲ, ಹೇಗೆ ಮಾಡುತ್ತೇವೆ ಎಂಬುದು ಮುಖ್ಯ

❖ The best way to bring up children is never to let them down

***February 24***

- ದರಿದ್ರ ನಾರಾಯಣನಿಂದ ದೋಚಿದ ಹಣ ಶ್ರೀಮಂತನ ಗೋರಿಯ ನಿರ್ಮಾಣಕ್ಕೆ ಮೀಸಲು

- ❖ If you cannot hold the children in your arms, hold them in your heart

***February 25***

- ● ಶ್ರೇಷ್ಠ ಗುಣಗಳನ್ನು ಬೆಳೆಸಿಕೊಂಡರೆ ಅವೇ ನಮ್ಮನ್ನು ರಕ್ಷಾ ಕವಚದಂತೆ ಕಾಪಾಡುತ್ತವೆ
- ❖ Give a little love to the child, and you will get back a great deal of it

***February 26***

- ● ಸ್ವರ್ಗ ನರಕದ ಕಲ್ಪನೆ ಕೇವಲ ಬಾಯಿ ಮಾತಿನಿಂದಲ್ಲ, ಸ್ವರ್ಗ ದೊರಕಲು ಜೀವನದಲ್ಲಿ ಸಾಧನೆ ಬೇಕು
- ❖ Small deeds done are better than great deeds planned

***February 27***

- ● ಎಂಥ ಪಾಪಿಯೂ ಒಂದು ದಿನ ಒಳ್ಳೆಯವನಾದಾನು; ಹಾಗೆಯೇ ಎಂಥ ಸಂತನೂ ಹಿಂದೆ ತಪ್ಪು ಮಾಡಿದ್ದಾನು
- ❖ By carrying a small stone each time, one day you will succeed in moving a mountain

***February 28 : National Science Day***

- ● ಮಿತಿಮೀರಿದ ಒತ್ತಡ ಹಾಕಿದರೆ ಅದು ಒಂದಾನೊಂದು ದಿನ ಸ್ಫೋಟಕ್ಕೆ ಕಾರಣವಾಗುತ್ತದೆ
- ❖ One loyal friend is worth ten thousand relatives

***February 29***

- ● ಇತರರ ಬಗ್ಗೆ ನಗುವುದು ಸುಲಭದ ಕೆಲಸ; ಆದರೆ, ಇತರರಿಗಾಗಿ ಅಳುವುದು ಕಷ್ಟದ ಕೆಲಸ
- ❖ Respect commands itself and it can neither be given nor withheld when it is due

# ಮಾರ್ಚ್ – March

**ವಾಚನ:– ಪ್ರತಿಯೊಂದು ಕಾಲಕ್ಕೂ ನಿಗದಿಯಾದ ಕಾಲವಿದೆ. ಜಗತ್ತಿನಲ್ಲಿ ನಡೆಯುವ ಒಂದೊಂದು ಕೆಲಸಕ್ಕೂ ಸೂಕ್ತ ಸಮಯವಿದೆ. ಹುಟ್ಟುವ ಸಮಯ, ಸಾಯುವ ಸಮಯ, ನೆಡುವ ಸಮಯ, ನೆಟ್ಟದ್ದನ್ನು ಕೀಳುವ ಸಮಯ, ಕೊಲ್ಲುವ ಸಮಯ, ಗುಣಪಡಿಸುವ ಸಮಯ, ಕೆಡವಿ ಬಿಡುವ ಸಮಯ, ಕಟ್ಟಿ ಎಬ್ಬಿಸುವ ಸಮಯ, ಅಳುವ ಸಮಯ, ನಗುವ ಸಮಯ, ಗೋಳಾಡುವ ಸಮಯ, ಕುಣಿದಾಡುವ ಸಮಯ, ಕಲ್ಲುಗಳನ್ನು ಬಿಸಾಡುವ ಸಮಯ, ಕಲ್ಲುಗಳನ್ನು ಕೂಡಿಸಿಡುವ ಸಮಯ, ಆಲಿಂಗನ ಮಾಡುವ ಸಮಯ, ಕಳೆದುಕೊಳ್ಳುವ ಸಮಯ, ಕಾಪಾಡುವ ಸಮಯ, ಬಿಸಾಡುವ ಸಮಯ, ಹರಿಯುವ ಸಮಯ, ಹೊಲಿಯುವ ಸಮಯ, ಸುಮ್ಮನಿರುವ ಸಮಯ, ಮಾತಾಡುವ ಸಮಯ, ಪ್ರೀತಿಸುವ ಸಮಯ, ದ್ವೇಷಿಸುವ ಸಮಯ, ಯುದ್ಧ ಮಾಡುವ ಸಮಯ, ಸಮಾಧಾನ ಮಾಡುವ ಸಮಯ**

### *March 1*

- ಕೆಟ್ಟ ನಡತೆಯುಳ್ಳ ಮನುಷ್ಯ ಸದಾ ದುಃಖಿ, ರೋಗಿ ಹಾಗು ಅಲ್ಪಾಯು
- ❖ It is the quality of our work that pleases God and not the quantity

### *March 2*

- ಪ್ರೀತಿಯಿದ್ದಲ್ಲಿ ಅಧಿಕಾರದ ಪ್ರಶ್ನೆ ಬರುವುದಿಲ್ಲ; ಅಧಿಕಾರವಿದ್ದಲ್ಲಿ ಪ್ರೀತಿಯ ಅಭಾವವಿರುತ್ತದೆ
- ❖ Home is the place where there is someone to love us

### *March 3 : Birth of Alexander Grahambel*

- ಬುದ್ಧಿವಂತರು ತಮ್ಮ ಹಾದಿ ತಾವೇ ಹುಡುಕುತ್ತಾರೆ, ತಮ್ಮ ದೀಪವನ್ನು ತಾವೇ ಹಿಡಿದೊಯ್ಯುತ್ತಾರೆ
- ❖ An optimist sees the rose and forgets the thorn below it

### *March 4*

- ಮನುಷ್ಯ ಅವಿವೇಕದ ಕೆಲಸ ಮಾಡಲು ನಾಚುವುದಿಲ್ಲ; ಮಾಡಿದ ಅವಿವೇಕವನ್ನು ತಿದ್ದಿಕೊಂಡು ವಿವೇಕಿ ಎನಿಸಿಕೊಳ್ಳಲು ನಾಚುತ್ತಾನೆ
- ❖ Happiness depends on what you give and not on what you get

*March 5*

- ನಮಗೆ ಬೇಡದವರ ಬಗ್ಗೆ ಕುಳಿತು ಚಿಂತಿಸುತ್ತಾ ಒಂದು ನಿಮಿಷವು ಕಾಲ ಕಳೆಯುವುದು ಬೇಡ

❖ The beauty of all things lies in the ability to appreciate them

*March 6*

- ನಿಮ್ಮ ಮನೆಗೆ ಯಾರು ಬಂದರೂ ಅವರಿಗೆ ಏನೂ ಕೊಡದಿದ್ದರು ಚಿಂತೆಯಿಲ್ಲ, ಒಳ್ಳೆಯ ಮಾತುಗಳಿಂದಾದರೂ ಸತ್ಕರಿಸು

❖ Everything that is done in the world is done by hope

***March 7 : World Sustainable Energy Day***

- ಶತ್ರುಗಳನ್ನು ಯಾವಾಗಲೂ ದ್ವೇಷಿಸಬೇಡ, ಏಕೆಂದರೆ ಕೆಲವೊಮ್ಮೆ ಅವನಿಂದಲೂ ಉಪಕಾರವಾದೀತು

❖ Try to learn something about everything and everything about something

***March 8 : International Women's Day – Literacy Day***

- ತಾಯಿ, ತಂದೆ, ಮಿತ್ರರು ಸಹಜವಾಗಿಯೇ ಒಳ್ಳೆಯದನ್ನು ಮಾಡುವರು. ಉಳಿದವರು ತಮ್ಮ ಕೆಲಸವಿದ್ದಾಗ ಹಿತಕಾರಿಗಳಾಗುವರು

❖ One good mother is worth a hundred school teachers

*March 9*

- ಈ ಪ್ರಪಂಚದಲ್ಲಿ ವಿಷಯವನ್ನು ತಿಳಿದುಕೊಳ್ಳುವವರು ವಿರಳ. ವಿಷಯವನ್ನು ತಿಳಿದು ವಿವರಿಸತಕ್ಕವರು ಇನ್ನೂ ವಿರಳ

❖ Be, you, therefore perfect, even as your father in heaven is perfect

*March 10*

- ನಾವು ಕಲಿತಿದ್ದು ಅತ್ಯಲ್ಪ, ಸಾಧಿಸಿದ್ದು ಸ್ವಲ್ಪ; ಆದರೆ, ನಾವು ಕಲಿತು ಸಾಧಿಸಬೇಕಾದದ್ದು ಅಪಾರ

❖ If I take care of my character, my reputation will take care of itself

***March 11: Death of Alexander Fleming***

- ಬುದ್ಧಿವಂತ ಮಾತನಾಡುವ ಮೊದಲು ಯೋಚನೆ ಮಾಡುತ್ತಾನೆ; ದಡ್ಡ ಮಾತನಾಡಿದ ನಂತರ ಯೋಚಿಸುತ್ತಾನೆ

- ❖ My best friend is the one who brings out the best in me

***March 12 : World Day of the Disabled***

- ● ತನ್ನ ಮತ್ತು ಇನ್ನೊಬ್ಬರ ಬಲಾಬಲವನ್ನು ತಿಳಿಯದ ವ್ಯಕ್ತಿಯನ್ನು ವೈರಿಗಳು ಸಹ ತಿರಸ್ಕಾರದಿಂದ ನೋಡುವರು
- ❖ Blessed are the merciful, for they shall obtain mercy

***March 13***

- ● ಅದೃಷ್ಟವೆನ್ನುವುದು ಒಂದು ಸಂತೆ ಇದ್ದಂತೆ, ಬಹುಬೇಗ ಅದರ ಬೆಲೆ ಇಳಿದು ಹೋಗುತ್ತದೆ
- ❖ At times, silence is the most perfect expression

***March 14 : Birth of Albert Einstein***

- ● ಅವಕಾಶಗಳು ನಮ್ಮನ್ನು ಹುಡುಕಿಕೊಂಡು ಬರುವುದಿಲ್ಲ; ಅವುಗಳನ್ನು ನಾವು ಹುಡುಕಿಕೊಂಡು ಹೋಗಬೇಕು
- ❖ One good head is better than hundred strong heads

***March 15 : World Consumer's Day***

- ● ಜ್ಞಾನಾರ್ಜನೆಗಾಗಿ ಹೂಡಿದ ಬಂಡವಾಳ, ಅತಿ ಹೆಚ್ಚಿನ ಬಡ್ಡಿಯನ್ನು ಗಳಿಸುತ್ತದೆ
- ❖ To achieve all that is possible we must attempt the impossible

***March 16***

- ● ಯಾವ ವ್ಯಕ್ತಿಗೆ ಕಟ್ಟುವ ಶಕ್ತಿ ಇಲ್ಲವೋ ಅವನಿಗೆ ಹಾಳು ಮಾಡುವ ಅಧಿಕಾರವೂ ಇಲ್ಲ
- ❖ Allow the noble thoughts come to us from every side

***March 17***

- ● ಎಷ್ಟೇ ಸುಲಭವಾಗಿ ಹೊಸ ಸ್ನೇಹಿತರು ದೊರೆತರೂ ಹಳೆಯ ಸ್ನೇಹಿತರನ್ನು ಮರೆಯಬೇಡ
- ❖ There is dignity in work only when work is freely accepted

***March 18***

- ● ಸಮಯ ಮತ್ತು ಸಮುದ್ರದ ಅಲೆಗಳು ಯಾರಿಗಾಗಿಯೂ ಕಾಯುವುದಿಲ್ಲ
- ❖ Use your imagination not to scare yourself to death but to inspire yourself to life

*March 19 : St. Joseph, Spouse of Mary*

- ಎಲ್ಲಿ ಸುಳ್ಳು ಸತ್ಯವಾಗುವುದೊ, ಸತ್ಯವು ಸುಳ್ಳಾಗುವುದೊ ಅಲ್ಲಿ ಸತ್ಯವನ್ನು ಹೇಳಿ ಏನೂ ಪ್ರಯೋಜನವಿಲ್ಲ

❖ A word of encouragement during a failure is worth more than an hour of praise after success

*March 20 : Death of Sir Isaac Newton*

- ಮೊದಲು ನಿನ್ನಲ್ಲಿರುವ ತಪ್ಪುಗಳನ್ನು ಹುಡುಕು; ನಂತರ ಪರರ ತಪ್ಪುಗಳನ್ನು ಹುಡುಕು

❖ Having been blessed by God, you must now become a blessing to others

*March 21 : World forestry Day*

- ನಂಬಿಕೆಯಿಂದ ಪ್ರಾರಂಭವಾಗುವ ಕಾರ್ಯ ಖಂಡಿತವಾಗಿಯೂ ಯಶಸ್ಸು ಸಾಧಿಸುತ್ತದೆ

❖ The roots of happiness grow deepest in the soil of service

*March 22 : World Day of Water*

- ಸಜ್ಜನರು ಆಡಿದ ಮಾತು ಶಿಲಾಲೇಖವಿದ್ದಂತೆ; ದುರ್ಜನರು ಆಡಿದ ಮಾತು ನಿರಿನಲ್ಲಿ ಬರೆದ ಅಕ್ಷರದಂತೆ

❖ Water and words are easy to spill, impossible to recover

*March 23*

- ನಿಮ್ಮಲ್ಲಿ ಸಾಸಿವೆ ಕಾಳಿನಷ್ಟು ಆತ್ಮ ವಿಶ್ವಾಸವಿದ್ದರೆ ನಿಮಗೆ ಯಾವ ಕಾರ್ಯವೂ ಅಸಂಭವವಲ್ಲ

❖ To achieve all that is possible we must attempt the impossible

*March 24 : World Tuberculosis Day*

- ಸ್ವತಂತ್ರವಾಗಿರಿ; ಚಟುವಟಿಕೆಯಿಂದಿರಿ; ದುಂದುವೆಚ್ಚ ಮಾಡದಿರಿ. ಈ ಕಿವಿ ಮಾತು ಮರೆಯದಿರಿ

❖ In order to succeed, we must first believe that we can

*March 25 : Annunciation of the Lord*

- ನಮಗೆ ಉತ್ತಮ ಗೆಳೆಯರೆಂದರೆ ನಾವೇ, ನಮ್ಮನ್ನು ಮೊದಲು ಅರಿಯುವುದೇ ಜೀವನದ ಮೊದಲ ಗುರಿ

- ❖ Instead of giving myself reasons why I can't, I give myself reasons why I can

*March 26*

- ● ನೀನು ಆರ್ಥಿಕವಾಗಿ ಬಡವನಾದರೂ ಪರವಾಗಿಲ್ಲ; ಹೃದಯದಲ್ಲಿ ಶ್ರೀಮಂತಿಕೆಯಿರಲಿ
- ❖ The more you praise and celebrate your life, the more there is in life to celebrate

*March 27*

- ● ಆಪತ್ತಿನಲ್ಲಿ ಸಂತಸದಲ್ಲಿ ಸಮಾನವಾಗಿ ಕಾರ್ಯ ಮಾಡುವವನೇ ಮಿತ್ರನು
- ❖ Our character is what we do when we think no one is looking

*March 28 : World Theatre Day*

- ● ಉತ್ತಮ ಮಣಿಯನ್ನು ತಲೆಯಲ್ಲಿ, ಕಂಠದಲ್ಲಿ, ಭುಜದಲ್ಲಿ ಎಲ್ಲಿ ಬೇಕಾದರೂ ಧರಿಸಿದರೆ ಸುಂದರವಾಗಿ ಕಾಣುವುದು
- ❖ Train your hand with skill, mind with wisdom and heart with love

*March 29*

- ● ಹಾವಿಗೆ ಹಲ್ಲಿನಲ್ಲಿ ವಿಷ, ನೊಣಕ್ಕೆ ತಲೆಯಲ್ಲಿ ವಿಷ, ಚೇಳಿಗೆ ಬಾಲದಲ್ಲಿ ವಿಷ, ದುರ್ಜನರಿಗೆ ಎಲ್ಲ ಅಂಗಗಳಲ್ಲೂ ವಿಷ
- ❖ Respect for ourselves guides our morals; respect for others guides our manners

*March 30*

- ● ನುಡಿಯಲು ಒಳ್ಳೆಯ ಮಾತುಗಳಿರುವಾಗ ಕೆಟ್ಟ ಮಾತುಗಳನ್ನು ಆಡುವುದೇಕೆ?
- ❖ Reputation is what the world thinks a man is; character is what he really is

*March 31*

- ● ಚೆನ್ನಾಗಿ ಅಭ್ಯಾಸವಾಗುವುದಕ್ಕಿಂತ ಮುಂಚೆ ಯಾವುದೇ ಕೆಲಸ ಅತ್ಯಂತ ಕಠಿಣವೆಂದು ತೋರುತ್ತದೆ
- ❖ United we stand and divided we fall

# ಎಪ್ರಿಲ್ – April

**ವಾಚನ:– ಮಕ್ಕಳೇ, ನನ್ನ ಉಪದೇಶವನ್ನು ಮರೆಯಬೇಡಿ, ನನ್ನ ಆಜ್ಞೆಗಳನ್ನು ನಿಮ್ಮ ಹೃದಯದಲ್ಲಿಡಿರಿ. ಅವು ನಿಮ್ಮ ದಿನಗಳನ್ನು ಹೆಚ್ಚಿಸುತ್ತವೆ; ನಿಮಗೆ ದೀರ್ಘಾಯಸ್ಸನ್ನು ತರುತ್ತವೆ, ನಿಮಗೆ ಸುಕ್ಷೇಮವನ್ನು ಉಂಟುಮಾಡುತ್ತವೆ. ಪ್ರೀತಿ ಸತ್ಯತೆಗಳು ನಿಮ್ಮನ್ನು ಬಿಡದಿರಲಿ; ಅವು ನಿಮ್ಮ ಕೊರಳಿನ ಪಟ್ಟಿಯಾಗಿರಲಿ. ಹೃದಯದ ಹಲಗೆಯಲ್ಲಿ ಲಿಖಿತವಾಗಿರಲಿ. ಆಗ ದೇವರಿಗೂ ಮಾನವರಿಗೂ ಪ್ರಿಯರಾಗುವಿರಿ, ದಯೆ ದಾಕ್ಷಿಣ್ಯವನ್ನು ಪಡೆಯುವಿರಿ. ನಿಮ್ಮ ಸ್ವಂತ ಬುದ್ಧಿಯನ್ನೆ ನೆಚ್ಚಿ ಕೊಂಡಿರದಿರಿ; ಪೂರ್ಣ ಮನಸ್ಸಿನಿಂದ ದೇವರಲ್ಲಿ ನಂಬಿಕೆಯಿಡಿ. ನೀವೇ ಬುದ್ಧಿವಂತರೆಂದು ಎಣಿಸಬೇಡಿ. ದೇವರಿಗೆ ಭಯಪಟ್ಟು ಕೆಟ್ಟದ್ದನ್ನು ತೊರೆದುಬಿಡಿ. ಆಗ ನಿಮಗೆ ದೇಹಾರೋಗ್ಯ ದೊರಕುವುದು, ನಿಮ್ಮ ಎಲುಬುಗಳಿಗೆ ಶಕ್ತಿಸಾರತ್ವ ಸಿಗುವುದು.**

***April 1***

- ಮೂರ್ಖನ ಹೃದಯ ಅವನ ಬಾಯಲ್ಲಿದೆ; ಜಾಣನ ಬಾಯಿ ಅವನ ಹೃದಯದಲ್ಲಿದೆ
- ❖ Teaching should be full of ideas instead of stuffed with facts

***April 2 : International Children's Book Day***

- ಗೆಳೆಯರು ಸಾಯಬಹುದು; ಆದರೆ ಅವರೊಡನಿದ್ದ ಗೆಳೆತನ ಎಂದಿಗೂ ಸಾಯುವುದಿಲ್ಲ
- ❖ He who cannot obey himself will be commanded. That is the nature of living creatures

***April 3***

- ತಿಳಿಯದೆ ಯಾವುದನ್ನೂ ಸೇವಿಸಬೇಡಿ; ಓದದೆ ಯಾವುದಕ್ಕೂ ರುಜು ಹಾಕಬೇಡಿ
- ❖ Work like you don't need the money. Love like you've never been hurt. Dance like nobody is watching

***April 4 : Anti-Child Prostitution Day***

- ಕತ್ತಲೆಯ ಮನೆಯಲ್ಲಿ ದೀಪ ಹಚ್ಚುವುದು ಸುಲಭ, ಆದರೆ ಗಾಳಿಯಿದ್ದ ಮನೆಯಲ್ಲಿ ದೀಪ ಹಚ್ಚುವುದು ಸುಲಭವಲ್ಲ
- ❖ What kids need today is plenty of love, security and discipline

***April 5***

- ಅನ್ಯಾಯ ಮಾಡುವವನು ಅದನ್ನು ಅನುಭವಿಸುವವನಿಗಿಂತಲೂ ಹೆಚ್ಚು ದುಃಖಿಯಾಗುತ್ತಾನೆ

❖ A person shows what he is by what he does with what he has

***April 6***

- ನಿನ್ನ ಭಂಡಾರವನ್ನು ಸ್ವರ್ಗದಲ್ಲಿ ಶೇಖರಿಸು, ಏಕೆಂದರೆ ಅಲ್ಲಿ ಕಳ್ಳರ ಭಯವಿಲ್ಲ, ತುಕ್ಕು ಹಿಡಿಯುವುದಿಲ್ಲ

❖ If you can't change your fate, change your attitude

***April 7 : Word Health Day***

- ಅತಿಯಾಗಿ ತಿನ್ನುವುದು ಹಾಗೂ ಅತಿ ಕಡಿಮೆ ತಿನ್ನುವುದು ರೋಗಿಗಳ ಲಕ್ಷಣವಲ್ಲದೆ ಬೇರೇನೂ ಅಲ್ಲ

❖ Cleanliness is next to Godliness

***April 8***

- ಅಧಿಕಾರ ಇದೆಯೆಂದು ಎಲ್ಲಾ ಕಡೆ ಉಪಯೋಗಿಸುವುದು ಮೂರ್ಖತನವೆ ಸರಿ

❖ Some people dream of success, while others wake up and work hard at it

***April 9***

- ಬಲವಾದ ನೂರು ಕೈಗಳಿಗಿಂತ ಚುರುಕಾದ ಒಂದು ಮೆದುಳು ಶ್ರೇಷ್ಠ

❖ He that is good for making excuses is seldom good for anything else

***April 10 : Promotion Day***

- ಹಣವಿದ್ದರೆ ನೀನು ನಿನಗೆ ಕಾಣುವುದಿಲ್ಲ; ಹಣವಿಲ್ಲದಿದ್ದರೆ ನೀನು ಊರಿಗೆ ಕಾಣುವುದಿಲ್ಲ

❖ We always succeed when we only wish to do well

***April 11 : Mahaveera Jayanthi***

- ಪ್ರೀತಿಗೆ ಪಾತ್ರರಾಗುವುದಕ್ಕಿಂತಲೂ ನಂಬಿಕೆಗೆ ಪಾತ್ರರಾಗುವುದು ಹೆಚ್ಚಿನ ಯೋಗ್ಯತೆ

❖ Your attitude is an expression of your values, beliefs and expectations

***April 12***

- We must always have old memories and young hopes
- ❖ ಇತರರು ನಿನಗಾಗಿ ಚಿಂತಿಸುವುದಿಲ್ಲ, ಆದರೆ ನೀನು ಮಾತ್ರ ಇತರರಿಗಾಗಿ ಚಿಂತಿಸುವುದನ್ನು ಕಲಿ

***April 13***

- ಕಾಲ ಅಮೂಲ್ಯವಾದುದು ನಿಜ ಆದರೆ ಸತ್ಯ ಕಾಲಕ್ಕಿಂತ ಅಮೂಲ್ಯವಾದುದು
- ❖ Good, better, best; never let it rest till your good is better and your better is best

***April 14 : Ambedkar Jayanthi***

- ಯಾರಿಗೆ ಅತಿ ಕಡಿಮೆ ಅವಶ್ಯಕತೆಗಳಿವೆಯೋ ಅವರು ದೇವರಿಗೆ ಅತಿ ಸಮೀಪದಲ್ಲಿದ್ದಾರೆ
- ❖ Great works are performed, not by strength, but by perseverance

***April 15***

- ಸರ್ವ ತ್ಯಾಗಿಯಾದವನಿಗೆ ಈ ಸೃಷ್ಠಿಯಲ್ಲಿ ಎಲ್ಲಿ ಹೇಗೆ ಸಂಚರಿಸಿದರೂ ಆಸೆ–ಅಂಜಿಕೆಗಳ ಕಾಟವಿಲ್ಲ
- ❖ Blessed are those who can give without remembering and take without forgetting

***April 16***

- ಆತ್ಮವನ್ನು ಕಳೆದುಕೊಂಡು ಇಡೀ ಜಗತ್ತನ್ನೇ ಗೆದ್ದುಕೊಂಡರೆ ಅದರಲ್ಲಿ ಏನು ಲಾಭ?
- ❖ A moment's insight is sometimes worth a life's experience

***April 17 : World Hemophilia Day***

- ಸುಳ್ಳು ಹೇಳುವವರು ಎಲ್ಲ ನಾಚಿಕೆಯನ್ನು ಬಿಟ್ಟೇ ನಿಂತಿರುತ್ತಾರೆ, ಸತ್ಯದ ಸೀಮೆಯನ್ನಂತೂ ಎಂದೋ ದಾಟಿಬಿಟ್ಟಿರುತ್ತಾರೆ
- ❖ The ear of the leader must ring with the voices of the people

***April 18 : World Heritage Day***

- ಮಾನವ ಸಾಯುತ್ತಾನೆ, ಆದರೆ ಅವನು ಬರೆದ ಪುಸ್ತಕ ಜೀವಂತ ಉಳಿಯುತ್ತದೆ

❖ We cannot overcome the world by bombs and guns, but by love and compassion

### *April 19*

- ಕಾಲವನ್ನು ಉಲ್ಲಂಘಿಸಿ ಯಾವ ಕಾರ್ಯವನ್ನೂ ಸಾಧಿಸುವುದು ಸಾಧ್ಯವಿಲ್ಲ

❖ One man all by himself is nothing.  Two people who belong together make a world

### *April 20*

- ಕ್ರೋಧದಲ್ಲಿ ಮಾತನಾಡುವ ಮೊದಲು ಹತ್ತರ ತನಕ ಎಣಿಸು, ಅಧಿಕ ಕ್ರೋಧವಿದ್ದರೆ ನೂರರ ತನಕ ಎಣಿಸು

❖ If you can imagine it you can achieve it, if you can dream it, you can become it

### *April 21 :  Secretaries Day*

- ಯಾರ ಬಳಿ ನಮ್ಮ ರಹಸ್ಯವನ್ನು ಹೇಳುತ್ತೇವೆಯೋ ಅವರ ಬಳಿ ನಮ್ಮ ಸ್ವಾತಂತ್ರ್ಯವನ್ನು ಮಾರಿಕೊಳ್ಳುತ್ತೇವೆ

❖ Each difficult moment has the potential to open my eyes and open my heart

### *April 22 : World Earth Day*

- ಈ ಭೂಮಿಯಲ್ಲಿ ನೀರು, ಆಹಾರ ಮತ್ತು ಸುಭಾಷಿತಗಳೆಂಬ ಮೂರು ರತ್ನಗಳಿವೆ

❖ As long as you live, keep learning how to live

### *April 23 : World Book & Copyright Day*

- ಇಡೀ ಜಗತ್ತೇ ಖಂಡಿಸುತ್ತಿರುವಾಗಲೂ ತಮ್ಮ ತಪ್ಪನ್ನು ಒಪ್ಪಿಕೊಳ್ಳುವಂಥ ಜನ ತೀರಾ ವಿರಳ

❖ If you add a little to a little, and then do it again, soon that little shall be much

### *April 24 : World Children's Day*

- ತಂದೆಯಾದವನು ಬಾಲ್ಯದಲ್ಲಿ ಮಕ್ಕಳಿಗೆ ಅಕ್ಷರ ವಿದ್ಯೆಯನ್ನು ಕಲಿಸಿ ವಿದ್ಯಾವಂತರನ್ನಾಗಿ ಮಾಡದಿದ್ದರೆ ಅವರನ್ನು ಕೊಂದಂತೆ ಸರಿ

❖ Children obey your parents in all ways; for, this is well pleasing to God

***April 25***

- ಪ್ರತಿಭೆ ನಿಜವಾಗಿ ಒಂದು ರೀತಿಯ ದೃಷ್ಟಿ; ಅದು ಬುದ್ಧಿಯ ಕಣ್ಣಲ್ಲ, ಹೃದಯದ ಕಣ್ಣು
- ❖ If you are comfortable with yourself, you will be comfortable anywhere

***April 26 : Chernobyl Day & Varaha Jayanthi***

- ಪ್ರಕೃತಿಯ ನಿಯಮಗಳನ್ನು ತಿಳಿದು ಅಥವಾ ತಿಳಿಯದೆಯೆ ಉಲ್ಲಂಘಿಸುವುದು ಅಸತ್ಯದ ಒಂದು ರೂಪ
- ❖ Death must be distinguished from dying, with which it is often confused

***April 27 : No Golf Day***

- ಹುಲ್ಲು, ಭೂಮಿ, ನೀರು ಹಾಗೂ ಒಳ್ಳೆಯ ಮಾತು ಈ ನಾಲ್ಕು ವಸ್ತುಗಳನ್ನು ಸಜ್ಜನರ ಮನೆಯಿಂದ ದೂರ ಮಾಡಲು ಸಾಧ್ಯವಿಲ್ಲ
- ❖ With every book you read, you add a millimeter to your mental stature

***April 28***

- ಕಾರ್ಯ ಮಾಡುವಾಗ ಧಕ್ಷನಾಗಿರು, ಮಾತನಾಡುವಾಗ ಎಚ್ಚರದಿಂದಿರು, ಯೋಚಿಸುವಾಗ ದೂರದೃಷ್ಠಿಯಿಂದಿರು
- ❖ Respect for the opinions of others is one of the cleverest signs of an educated man

***April 29: Shivaji Jayanthi – International Dance Day***

- ನಾಳೆ ಏನು ಬರುತ್ತದೆ ಎಂಬುದನ್ನು ನಿರೀಕ್ಷಿಸುತ್ತಾ ನಾವು ಕಾಲ ಕಳೆಯಬೇಕೇ ವಿನಹ, ಕಳೆದು ಹೋದುದನ್ನು ಚಿಂತಿಸುತ್ತಾ ಕುಳಿತಿರಬಾರದು
- ❖ Mastering others is strength. Mastering yourself is true power

***April 30 : Basava Jayanthi – anti child Labour Day***

- ವಿಚಾರವಿಲ್ಲದೆ ಮಾಡುವ ಕಾನೂನು, ಅರ್ಥವಿಲ್ಲದೆ ಹೇಳುವ ವೇದಾಂತ, ತಿಳುವಳಿಕೆಯಿಲ್ಲದೆ ನಡೆಸುವ ಆಡಳಿತ, ಇವು ಎಂದೂ ಯಶಸ್ವಿಯಾಗಲಾರವು
- ❖ No matter how busy you are, you must take time to make the other person feel important

# ಮೇ – May

**ವಾಚನ:– ಪಾರಮಾರ್ಥಿಕವಾಗಿ ಬಡವರು ಭಾಗ್ಯವಂತರು; ಸ್ವರ್ಗಸಾಮ್ರಾಜ್ಯ ಅವರದು. ದುಃಖಿಗಳು ಭಾಗ್ಯವಂತರು; ದೇವರು ಅವರನ್ನು ಸಂತೈಸುವರು. ವಿನಯಶೀಲರು ಭಾಗ್ಯವಂತರು; ದೇವರ ವಾಗ್ದತ್ತ ನಾಡಿಗೆ ಬಾಧ್ಯಸ್ಥರು ಅವರು. ನ್ಯಾಯನೀತಿಗಾಗಿ ಹಸಿದು ಹಾತೊರೆಯುವವರು ಭಾಗ್ಯವಂತರು; ದೇವರು ಅವರಿಗೆ ತೃಪ್ತಿಯನ್ನೀಯುವರು. ದಯಾವಂತರು ಭಾಗ್ಯವಂತರು; ದೇವರ ದಯೆ ಅವರಿಗೆ ದೊರಕುವುದು. ನಿರ್ಮಲ ಹೃದಯಿಗಳು ಭಾಗ್ಯವಂತರು; ಅವರು ದೇವರನ್ನು ಕಾಣುವರು. ಶಾಂತಿಗಾಗಿ ಶ್ರಮಿಸುವವರು ಭಾಗ್ಯವಂತರು; ಅವರು ದೇವರ ಮಕ್ಕಳೆನಿಸಿಕೊಳ್ಳುವರು. ನ್ಯಾಯನೀತಿಯ ನಿಮಿತ್ತ ಹಿಂಸೆಯನ್ನು ತಾಳುವವರು ಭಾಗ್ಯವಂತರು; ಸ್ವರ್ಗಸಾಮ್ರಾಜ್ಯ ಅವರದು**

***May 1 : World Labour Day – St. Joseph the Worker***

- ನೀವು ಸದಾಕಾಲ ಆನಂದದಿಂದಿರಬೇಕಾದರೆ ನಿಮ್ಮನ್ನು ಸದಾಕಾಲ ದುಡಿಮೆಯಲ್ಲಿ ತೊಡಗಿಸಿಕೊಳ್ಳಿರಿ

❖ The harder you work, the harder it is to surrender

***May 2: Shankara Jayanthi***

- ಹಣದಿಂದ ಎಲ್ಲವನ್ನೂ ಪಡೆಯಬಹುದು. ಆದರೆ ಸ್ನೇಹ, ವಿಶ್ವಾಸ, ಮಮತೆಗಳನ್ನು ಪಡೆಯಲಾಗದು. ಅದನ್ನು ಒಲವಿನಿಂದ ಮಾತ್ರ ಪಡೆದುಕೊಳ್ಳಬಹುದು

❖ The fear of the Lord is the beginning of wisdom

***May 3 : World Press Freedom Day – World Asthma Day***

- ಇನ್ನೊಬ್ಬನ ತಪ್ಪನ್ನು ಕೆದಕುವುದು, ಹಾಗೂ ಇನ್ನೊಬ್ಬರ ಬಗ್ಗೆ ಸುದ್ಧಿ ಮಾಡುವುದು, ಯಾವಾಗಲೂ ಲಾಭವಿಲ್ಲದ ಕೆಲಸ

❖ Good teachers are costly, but bad teachers cost more

***May 4 : Coal Mines Day***

- ನಮ್ಮ ಹೊರಗೆ ಇರುವಷ್ಟು ಜಗತ್ತು ನಮ್ಮ ಒಳಗಡೆಯೂ ಇದೆ. ಅದನ್ನು ನೋಡಲು, ಅರಿಯಲು, ನಮ್ಮ ಆತ್ಮದ ಕಣ್ಣು ತೆರೆಯಬೇಕು

❖ What we want is to see the child in pursuit of knowledge, and not knowledge in pursuit of the child

***May 5***

- ನಿನ್ನ ಹೃದಯದ ಬತ್ತಿ ಉರಿಯುತ್ತಿದ್ದಾಗೆ ಮಾತ್ರ ನೂರೆಂಟು ವಿವಿಧ ಬತ್ತಿಗಳನ್ನು ಹಚ್ಚಲು ಸಾಧ್ಯ

❖ Each one is precious in the sight of God

***May 6***

- ಚಿನ್ನ ಬೆಳ್ಳಿ ಮಾತ್ರ ನಾಣ್ಯಗಳಲ್ಲ, ಗುಣವು ನಾಣ್ಯವೆ. ಇದು ಜಗತ್ತಿನ ಎಲ್ಲ ಕಡೆಗು ಚಲಾವಣೆಯಾಗುತ್ತದೆ

❖ God has a plan for you, plan for your welfare

***May 7***

- ಜೀವನವು ಯಾವಾಗಲೂ ನಾವು ಎಣಿಸಿದಂತೆ ಹೂವಿನ ಹಾಸಿಗೆಯಲ್ಲ, ಕೆಲವೊಮ್ಮೆ ಮುಳ್ಳಿನ ಹಾಸಿಗೆಯೂ ಹೌದು

❖ God has carved my name on the palm of His hand

***May 8 : World Red Cross Day***

- ಇತರರ ಅನ್ನದ ತುತ್ತಿಗೆ ಕಲ್ಲು ಹಾಕದಿರು, ಅದೇ ಕಲ್ಲು ನಿನ್ನ ಅನ್ನದ ತುತ್ತಿಗೂ ಬಿದ್ದೇತೆಂಬ ಪೂರ್ವ ಭಯ ನಿನಗಿರಲಿ

❖ Failures are the stepping stones to success

***May 9 : World Thalassaemia Day***

- ಯಾವುದೇ ಕೆಲಸವನ್ನು ಶಾಂತಿಯಿಂದ, ದೃಢತೆಯಿಂದ ಕೈಗೊಂಡಲ್ಲಿ ಜಯ ಲಭಿಸುವುದು ಖಂಡಿತ

❖ Who dares to teach must never cease to learn

***May 10***

- ಒಂದು ಹೃದಯವನ್ನು ಅರ್ಥಮಾಡಿಕೊಳ್ಳಲು ಇನ್ನೊಂದು ಹೃದಯದಿಂದ ಮಾತ್ರ ಸಾಧ್ಯ

❖ There is no substitute for hard work

***May 11 : World Day of Social Communication***

- ಸಂತೋಷದಿಂದಿರುವುದರ ಗುಟ್ಟು ಇತರರನ್ನೂ ಸಂತೋಷ ಪಡಿಸುವುದರಲ್ಲಿದೆ

❖ Teach your children by what you are, not just by what you say

***May 12 : International Nurse's Day***

- ಮನೆಯಲ್ಲಿ ಮಂಗನನ್ನು ಕಟ್ಟಿ ಕೊಂಡ ಮೇಲೆ, ಅದು ಗಾಜನ್ನು ಒಡೆದರೂ ಸುಮ್ಮನಿರಬೇಕಾಗುತ್ತದೆ

❖ Life's most urgent question is: what are you doing for others?

***May 13***

- ವಿದ್ವಾಂಸರು ನೋಡಿ ಸಂತೋಷಪಡುವವರೆಗು ತನ್ನ ಕಾರ್ಯ ಕೌಶಲ್ಯವು ಚೆನ್ನಾಗಿದೆಯೆಂದು ಯಾರು ತಿಳಿಯಬಾರದು

❖ Think more of what life has given us and less about what life has taken away

***May 14 : Mother's Day***

- ಬೆಳಕಿನಲ್ಲಿ ಬೆಳಕಿಗೆ ಬೆಲೆಯಿಲ್ಲ; ಆದರೆ, ಕತ್ತಲೆಯಲ್ಲಿ ಕಿರು ದೀಪಕ್ಕೂ ಹಿರಿದಾದ ಬೆಲೆಯುಂಟು

❖ You can be pleased with nothing when you are not pleased with yourself

***May 15 : International Day of the Family***

- ದೇವರು ಎರಡು ಸ್ಥಾನಗಳಲ್ಲಿ ನಿವಾಸ ಮಾಡುತ್ತಾರೆ. ಒಂದು ಸ್ವರ್ಗ ಲೋಕ ಇನ್ನೊಂದು ಕೃತಜ್ಞತಾಪೂರ್ಣವಾದ ಮಾನವನ ಹೃದಯ

❖ The family that prays together stays together

***May 16***

- ನಿನಗೆ ಯಾರೂ ಕೇಡು ಮಾಡಬಾರದೆಂದು ಬಯಸಿದರೆ, ನೀನು ಯಾರಿಗೂ ಕೇಡು ಮಾಡಬೇಡ

❖ Great thoughts always come from the heart

***May 17***

- ಯಾರು ಕಾಲವನ್ನು ವ್ಯರ್ಥವಾಗಿ ಕಳೆಯುತ್ತಾರೊ, ಅಂಥವರೇ ಹೆಚ್ಚಾಗಿ ಸಮಯ ಸಾಲದು ಎಂದು ದೂರುತ್ತಾರೆ

❖ Conscience is the frame of character and love is the covering for it

***May 18***

- ತಾನು ತಿಳಿದು ಸುಂದರವಾಗಿ ಹೇಳಬಲ್ಲವರು ಶ್ರೇಷ್ಠ ಶಿಕ್ಷಕರು
- ❖ Gratitude is not only the greatest of virtues, but the parent of all others

***May 19***

- ನಿಂತಿರುವಾಗ ಕೋಪ ಬಂದರೆ ಕುಳಿತು ಕೊಳ್ಳಿ, ಆಗ ನಿಮ್ಮ ಕೋಪ ತಗ್ಗುತ್ತದೆ, ಅದೂ ವಿಫಲವಾದರೆ ಕಾಲು ಚಾಚಿ ಮಲಗಿ
- ❖ There is a time to speak and a time to keep silence

***May 20***

- ಅಜ್ಞಾನವೆಂಬ ಕತ್ತಲನ್ನು ತೊಳೆದು ಜ್ಞಾನವೆಂಬ ಬೆಳಕು ನೀಡುವುದೇ ಶಿಕ್ಷಣ
- ❖ Never do anything against conscience even if the state demands it

***May 21 : Anti – Terrorism Day***

- ಮಾನವನಿಗೆ ಅವಶ್ಯವಿದ್ದಷ್ಟೇ ಪಡೆಯುವುದು ಧರ್ಮ; ಅವಶ್ಯಕತೆಯಿಲ್ಲದ್ದನ್ನು ಪಡೆಯುವುದು ಕಳ್ಳತನ ಮಾಡಿದ ಹಾಗೆ
- ❖ Kindness is a language which the deaf can hear and the blind can read

***May 22***

- ಯಾವ ಕೆಲಸವನ್ನು ನಾಳೆ ಎಂದು ಮುಂದೆ ಹಾಕಬೇಡ; ಏಕೆಂದರೆ ಆ 'ನಾಳೆ' ಎಂದಿಗೂ ಬರದಿರಬಹುದು
- ❖ To attain knowledge, add things everyday; to attain wisdom, remove things everyday

***May 23***

- ಒಳ್ಳೆಯದನ್ನು ಮಾಡುವ ಇಷ್ಟವಿದ್ದರೆ ಈಗಲೇ ಮಾಡು; ಕೆಟ್ಟದ್ದಾದರೆ ನಿಧಾನಿಸು, ಹಾಗೂ ಯೋಚಿಸು
- ❖ People who feel good about themselves produce good results

***May 24***

- ಸುಳ್ಳು ಹೇಳುವವನಿಗೆ ಆಗುವ ಲಾಭ ಒಂದೇ; ಅವನು ಸತ್ಯವನ್ನು ಆಡಿದರೂ ಅವನನ್ನು ಯಾರೂ ನಂಬುವುದಿಲ್ಲ

- ❖ Every man is the architect of his own future

***May 25***

- ● ಬದುಕಲು ತಿನ್ನಬೇಕು ಎಂಬುದು ಸರಿ. ಆದರೆ ಬದುಕುವುದೇ ತಿನ್ನಲು ಎಂಬುದು ಎಂತಹ ವಿಪರ್ಯಾಸ
- ❖ Education is to the mind what culture is to the heart

***May 26***

- ● ಸುಗುಣ ದೇಹದ ಚೆಲುವನ್ನು ಹೆಚ್ಚಿಸಿದರೆ, ದುರ್ಗುಣ ಅದನ್ನು ಕುಗ್ಗಿಸುತ್ತದೆ
- ❖ If you wanted and did not get, it may be that you do not need it

***May 27***

- ● ಪ್ರತಿಯೊಬ್ಬ ವ್ಯಕ್ತಿಯು ತನ್ನನ್ನು ತಾನು ತಿದ್ದಿಕೊಳ್ಳುವುದು ಅವನ ಮೊದಲ ಕೆಲಸ
- ❖ God's deepest messages are whispered to you in silence

***May 28***

- ● ಮನಸ್ಸನ್ನು ಶುಚಿಯಾಗಿಟ್ಟುಕೊಳ್ಳಬೇಕು, ಕೆಟ್ಟ ಮನಸ್ಸು ಕೆಟ್ಟದನ್ನೆ ಮಾಡಿಸುತ್ತದೆ
- ❖ He who humbles himself will be exalted

***May 29***

- ● ಎಲ್ಲರ ಸಾರ್ಥಕ ಜೀವನ ಮಟ್ಟವೂ ಅವರ ಸಾಧನೆಯ ಮಟ್ಟವನ್ನು ಅವಲಂಭಿಸಿದೆ
- ❖ If there is a smile in your heart, your face will show it

***May 30***

- ● ಉಪಕಾರ ಮರೆಯುವುದು ನೀಚತನ; ಅಪಕಾರ ಮರೆಯುವುದು ಉತ್ತಮ ಗುಣ
- ❖ The surest way to gain respect is to earn it by conduct

***May 31 : World Telecommunication Day and World No-tobacco Day***

- ● ಸಂತೋಷವನ್ನು ಮತ್ತೊಬ್ಬರಲ್ಲಿ ಹಂಚಿಕೊಂಡರೆ ಅದು ಇಮ್ಮಡಿಯಾಗುವುದು
- ❖ Promise yourself to be so strong that nothing can disturb your peace of mind

# ಜೂನ್ – June

**ವಾಚನ:– ಮಕ್ಕಳೇ, ದೇವರ ಶಿಕ್ಷೆಯನ್ನು ತಾತ್ಸಾರಮಾಡಬೇಡಿರಿ, ಆತನು ನೀಡುವ ಎಚ್ಚರಿಕೆಗೆ ಬೇಸರಗೊಳ್ಳಬೇಡಿರಿ. ತನ್ನ ಮುದ್ದು ಮಗನನ್ನು ತಂದೆ ಗದರಿಸುವಂತೆ, ದೇವರು ತಾನು ಪ್ರೀತಿಸುವವರನ್ನು ಗದರಿಸುತ್ತಾನೆ. ಬೆಳ್ಳಿಗಿಂತ ಜ್ಞಾನವನ್ನು ಕಂಡುಹಿಡಿಯುವವನು ಧನ್ಯನು, ವಿವೇಕವನ್ನು ಗಳಿಸುವವನು ಭಾಗ್ಯವಂತನು. ಬೆಳ್ಳಿಗಿಂತ ಜ್ಞಾನಗಳಿಕೆ ಶ್ರೇಷ್ಠ, ಬಂಗಾರಕ್ಕಿಂತ ಜ್ಞಾನ ಸಂಪಾದನೆ ಉತ್ಕೃಷ್ಟ. ಮಾಣಿಕ್ಯಕ್ಕಿಂತ ಜ್ಞಾನದ ಬೆಲೆ ಅಮೂಲ್ಯ. ನಿಮಗಿಷ್ಟವಾದುದಾವುದೂ ಅದಕ್ಕೆ ಸಾಟಿಯಲ್ಲಿ. ದೀರ್ಘಾಯುಷ್ಯ, ಜ್ಞಾನವೆಂಬ ಆಕೆಯ ಬಲಗೈಯಲ್ಲಿದೆ; ಘನತೆ, ಶ್ರೀಮಂತಿಕೆಯೂ ಆಕೆಯ ಎಡಗೈಯಲ್ಲಿವೆ. ಆಕೆಯ ದಾರಿ ಸುಖಕರ, ಆಕೆಯ ಮಾರ್ಗ ಕ್ಷೇಮಕರ. ತನ್ನನ್ನು ಅಪ್ಪಿಕೊಂಡವರಿಗೆ ಜ್ಞಾನವು ಜೀವವೃಕ್ಷ; ಅದನ್ನು ಅವಲಂಭಿಸುವ ಪ್ರತಿಯೊಬ್ಬನಿಗೆ ಸೌಭಾಗ್ಯ. ಸರ್ವೇಶ್ವರ ಸ್ವಾಮಿ ಜ್ಞಾನದ ಮೂಲಕ ಜಗವನ್ನು ಸ್ಥಾಪಿಸಿದ; ವಿವೇಕದ ಮುಖಾಂತರ ಗಗನವನ್ನು ಸ್ಥಿರಗೊಳಿಸಿದ. ಆತನ ಜ್ಞಾನದಿಂದಲೆ ಅಡಿಸಾಗರ ಒಡೆಯುತ್ತದೆ; ಆಕಾಶಮಂಡಲ ಇಬ್ಬನಿಯನ್ನು ಸುರಿಸುತ್ತದೆ.**

### *June 1*

- ವಿದ್ಯೆಯ ಮುಖ್ಯ ಗುರಿಯೇನೆಂದರೆ, ಇತರರೊಡನೆ ಕೂಡಿ ಬಾಳುವ ಕಲೆಯನ್ನು ಕಲಿಸುವುದು

❖ Greatest charity is imparting right knowledge which leads to right action

### *June 2*

- ಯಶಸ್ಸನ್ನು ಹುಡುಕಿಕೊಂಡು ಹೋಗಬಾರದು; ಅದು ನಮ್ಮನ್ನು ಹುಡುಕಿಕೊಂಡು ಬರಬೇಕು

❖ It is much harder to turn word into deed than deed into word

### *June 3*

- ಸತ್ಯವನ್ನು ತಿಳಿಯುವುದು ಜ್ಞಾನಮಾರ್ಗ, ಸತ್ಯವನ್ನು ನಂಬುವುದು ಭಕ್ತಿಮಾರ್ಗ, ಸತ್ಯಪಥದಲ್ಲಿ ನಡೆಯುವುದು ಮುಕ್ತಿಮಾರ್ಗ

❖ Most people succeed in small things if they are not troubled with great ambitions

### *June 4 : International Day of Innocent Children*

- ತ್ಯಾಗ ಬುದ್ಧಿಯುಳ್ಳವರು ಕೆಡುವುದಿಲ್ಲ; ಕೆಡುವ ಜನರಿಗೆ ತ್ಯಾಗ ಬುದ್ಧಿಯಿರುವುದಿಲ್ಲ

- ❖ Love has no ambition. It bears, believes, hopes and endures all things

***June 5 : World Environment Day***

- ಪ್ರಕೃತಿಯನ್ನು ಪ್ರೀತಿಸುವವರಿಗೆ ಜೀವನದಲ್ಲಿ ಬೇಸರವೆಂಬುದೇ ಇರುವುದಿಲ್ಲ
- ❖ Be yourself, be natural. It is far easier than pretending to be someone else

***June 6***

- ಚಪ್ಪಲಿಗಳೆರಡೂ ಮನುಷ್ಯರಂತಲ್ಲ; ಅವು ಒಳ್ಳೆಯ ಮಿತ್ರರು. ಒಂದನ್ನು ಬಿಟ್ಟು ಮತ್ತೊಂದು ಇರದು
- ❖ When the child begins to pick up the alphabet, he should be initiated into the science of the soul

***June 7***

- ಹೃದಯದಲ್ಲಿ ಸ್ಥಾನವಿದ್ದಾಗ, ಮನೆಯಲ್ಲಿ ಗಣನೀಯ ಸ್ಥಾನ ಇದ್ದೇ ಇರುತ್ತದೆ
- ❖ One who causes pain to others, can never experience real joy

***June 8 : World Ocean Day***

- ಜಯಗಳಿಸುತ್ತೇನೆಂಬ ಪೂರ್ಣ ಭರವಸೆಯಿಂದ ಸತತ ಪ್ರಯತ್ನಮಾಡು; ಕಟ್ಟಕಡೆಯವರೆಗೂ ಹೋರಾಡು; ಜಯ ನಿನ್ನದಾಗುವುದು
- ❖ Every saint has a past; every sinner has a future

***June 9***

- ಬೇರೆಯವರು ನಿಮ್ಮನ್ನು ಪ್ರಶಂಸಿಸಬೇಕು ಎಂಬ ನಿರೀಕ್ಷೆಯಿಂದ ದಾನಮಾಡಬೇಡಿ
- ❖ Every situation in life must be faced, why not face it with Love?

***June 10***

- ಮಾನವ ತನ್ನ ಬದುಕಿನಲ್ಲಿ ಪಾಪವನ್ನು ತಡೆಗಟ್ಟಬೇಕು; ಪಾಪರಹಿತ ಜೀವನವೇ ದೊಡ್ಡ ಸಂಪತ್ತು
- ❖ If I am honest in all my dealings, I can never experience fear

***June 11***

- ನಾವು ಖಂಡಿತ ಗೆಲ್ಲುತ್ತೇವೆ ಎಂದು ಬಂದವರು, ಸೋಲುವುದಕ್ಕೂ ಸದಾ ಸಿದ್ಧರಾಗಬೇಕು

- ❖ If I do not clear up doubts in my mind, it is like allowing a cancer to grow

***June 12 : World Draught Day***

- ● ದೊಡ್ಡ ಮನುಷ್ಯ ತನ್ನನ್ನೆ ನಿಂದಿಸಿಕೊಂಡರೆ, ಸಾಮಾನ್ಯ ಮನುಷ್ಯ ಪರರನ್ನು ನಿಂದಿಸುತ್ತಾನೆ
- ❖ Charity begins at home is the voice of the world

***June 13 : Feast of St. Antony of Padua***

- ● ಯಾವ ಕಾರ್ಯಗಳಿಂದ ನಿಮಗೆ ಸುಖವಾಗಬಹುದೋ, ಅವೇ ಕಾರ್ಯಗಳಿಂದ ನಿಮಗೆ ಮುಂದೆ ಕಷ್ಟವಾಗಬಹುದು
- ❖ A good deed is one that brings a smile of joy to the face of another

***June 14***

- ● ಸ್ವರ್ಗಸುಖ ಏನೆಂಬುದರ ಅರಿವಾಗಬೇಕಾದರೆ ಕೆಲವು ಕ್ಷಣಗಳಷ್ಟು ಕಾಲವಾದರೂ ನರಕವಾಸ ಅನುಭವಿಸಬೇಕು
- ❖ If I keep the weaknesses of others in my mind, they soon become part of me

***June 15***

- ● ಕಾಲ ನಮಗೆ ಸೇರಿದ್ದು; ಆ ಕಾಲವನ್ನು ಸದುಪಯೋಗಪಡಿಸಿಕೊಂಡವನೆ ಶ್ರೀಮಂತ
- ❖ Little things are little things; but faithfulness to little things is a great thing

***June 16***

- ● ಹೊಗಳಿಕೆಗೆ ಸಂತೋಷ ಪಡುವುದು, ತೆಗಳಿಕೆಗೆ ನೋಯುವುದು ಅಜ್ಞಾನದ ಸಂಕೇತ
- ❖ A stitch in time saves nine

***June 17***

- ● ಭಾಗ್ಯದ ಬೆನ್ನು ಹತ್ತಿ ನಾವು ಓಡುವಂತೆ, ಭಾಗ್ಯವಂತರ ಬೆನ್ನುಹತ್ತಿ ಭಾಗ್ಯವು ಓಡುತ್ತಿರುತ್ತದೆ

- ❖ Everything has its own beauty but not everyone sees it

***June 18 : Father's Day***

- ● ಅನ್ಯಾಯಗಳನ್ನು ಮಾಡಿಯೂ ಶಿಕ್ಷೆಗೆ ಒಳಗಾಗದಿರುವುದು ಯಾರಿಗೂ, ಎಂದಿಗೂ ಸಾಧ್ಯವಿಲ್ಲ
- ❖ Patience and time should be your two best friends

***June 19***

- ● ಅನ್ಯಾಯದಿಂದ ಗಳಿಸಿದ ಹಣವು ವಂಶವನ್ನೇ ನಾಶ ಮಾಡುತ್ತದೆ
- ❖ God brings people into deep waters, not to drown them but to clean them

***June 20 : World Refugee Day***

- ● ಕತ್ತಲನ್ನು ದೂಷಿಸಿ ಪ್ರಯೋಜನವಿಲ್ಲ; ಒಂದು ದೀಪ ಹೊತ್ತಿಸಿದರೆ ಕತ್ತಲು ತಾನಾಗಿಯೇ ಓಡಿಹೋಗುತ್ತದೆ
- ❖ The greatest service is to share with others the joys of living

***June 21***

- ● ಗುಂಡುಸೂಜಿಯಿಂದ ಹಳ್ಳ ತೋಡುವುದು ಎಷ್ಟು ಕಷ್ಟವೊ, ದುಡಿದು ಹಣ ಸಂಗ್ರಹಿಸುವುದೂ ಅಷ್ಟೆ ಕಷ್ಟ
- ❖ A hard beginning makes a good ending

***June 22***

- ● ಯಾರನ್ನು ಕಂಡು ನೀವು ಅಂಜುವಿರೋ, ನಿಮ್ಮನ್ನು ಕಂಡು ಅವರು ಅಂಜುತ್ತಾರೆ
- ❖ The best way to make children good is to make them happy

***June 23***

- ● ಸಣ್ಣ ಕಾರಣಕ್ಕಾಗಿ ಕಂಡಕಂಡವರನ್ನು ನಿಂದಿಸುವುದು ಮೂರ್ಖತನದ ಪರಮಾವಧಿ
- ❖ Childhood shows the person, as morning shows the day

***June 24 : Feast of St. John the Baptist***

- ● ಯಾವ ವ್ಯಕ್ತಿಯು ತನಗೆ ತಾನೇ ಕಡಿವಾಣ ಹಾಕಿಕೊಳ್ಳುವನೋ ಅವನೇ ಸ್ವತಂತ್ರ ವ್ಯಕ್ತಿ
- ❖ A good teacher is like a candle – it consumes itself to light the way

***June 25***

- ನೀನು ಬೇರೆಯವರಿಗೆ ಒಳ್ಳೆಯದನ್ನು ಮಾಡದಿದ್ದರೂ ಚಿಂತೆಯಿಲ್ಲ; ಆದರೆ ಕೆಟ್ಟದ್ದನ್ನಂತೂ ಮಾಡಲೇಬೇಡ
- ❖ An attempt may be a failure but there should be no failure of attempt

***June 26 : International Day against Drug Abuse***

- ನಗುವು ಸಾವನ್ನು ಮುಂದೂಡುತ್ತದೆ; ಆದುದರಿಂದ ಮನುಷ್ಯ ನಕ್ಕು ನಲಿಯುವುದನ್ನು ಕಲಿಯಬೇಕು
- ❖ A successful man never leaves any work incomplete

***June 27 : World Diabetes Day***

- ಸೂರ್ಯ ಪ್ರಕಾಶವು ಬಡವ–ಬಲ್ಲಿದರೆನ್ನದೆ ಎಲ್ಲರ ಮನೆಯ ಮೇಲೂ ಸಮನಾಗಿ ಬೀಳುವುದು
- ❖ Good friends are rare; hence preserve them with care

***June 28***

- ಸೌಂದರ್ಯವು ವಸ್ತುಗಳಲ್ಲಿಲ್ಲ; ಅದನ್ನು ನೋಡಿ ಆನಂದಿಸುವ ಕಣ್ಣುಗಳಲ್ಲಿರುತ್ತದೆ
- ❖ There is a sweet joy that comes to us after sorrow

***June 29 : Feast of Sts. Peter & Paul***

- ಜ್ಞಾನದಾನಗುಣದೊಡನೆ ಬೆರೆತರೆ ಚಿನ್ನಕ್ಕೆ ಪರಿಮಳವಿಟ್ಟಂತೆ
- ❖ The heart of the fool is in his mouth, but the mouth of the wise is in his heart

***June 30 : Death of Arvil Right***

- ತನ್ನ ಕಾಲಿನ ಮೇಲೆ ನಿಂತುಕೊಳ್ಳಲು ಯಾರಿಗೆ ಶಕ್ತಿಯಿದೆಯೊ ಅವನೆ ಜಗತ್ತಿನಲ್ಲಿ ಅತ್ಯಂತ ಬಲಿಷ್ಠ
- ❖ Be the magnet of peace so that you can attract peaceless souls

# ಜುಲೈ – July

**ವಾಚನ :– ಮಕ್ಕಳೇ, ಸುಜ್ಞಾನ ಸುದ್ಬುದ್ಧಿಗಳು ನಿಮ್ಮಲ್ಲಿ ಸ್ಥಿರವಾಗಿರಲಿ; ನಿಮ್ಮ ಕಣ್ಣುಗಳಿಂದ ಅವು ಮರೆಯಾಗದಿರಲಿ. ಮಲಗುವಾಗ ನಿಮಗೆ ಹೆದರಿಕೆಯಿರದು, ಮಲಗಿದ ಮೇಲೆ ಸುಖನಿದ್ರೆ ಬರುವುದು. ದೇವರೇ ನಿಮಗೆ ಆಧಾರವಾಗಿರುವವರು, ನಿಮ್ಮ ಕಾಲು ಉರುಳಿಗೆ ಸಿಕ್ಕದಂತೆ ಕಾಪಾಡುವರು. ಆದುದರಿಂದ ನೀವು ಮಾತ್ರ ನಿಮ್ಮ ಕೈಲಾದಾಗ ಉಪಕಾರಮಾಡಿರಿ, ಕೇಳುವವರಿಗೆ ಅದನ್ನು ನಿರಾಕರಿಸಬೇಡಿರಿ, ನೆರೆಯವನಿಗೆ ನೀಡಲು ಇದೀಗಲೇ ನಿಮ್ಮಲ್ಲಿರುವಾಗ, ಹೋಗಿ ಬಾ ನಾಳೆ ಕೊಡುತ್ತೇನೆ ಎನ್ನಬೇಡಿರಿ. ನೆರೆಯವನಿಗೆ, ಪಕ್ಕದಲ್ಲಿ ನಂಬಿಕೆಯಿಂದ ವಾಸಿಸುವವನಿಗೆ ಕೇಡನ್ನು ಬಗೆಯಬೇಡಿರಿ. ನಿಮಗೆ ಕೇಡು ಮಾಡದವನ ಸಂಗಡ, ಕಾರಣವಿಲ್ಲದೆ ಜಗಳ ಮಾಡಬೇಡಿರಿ. ಹಿಂಸಾತ್ಮಕನನ್ನು ನೋಡಿ ಹೊಟ್ಟೆಕಿಚ್ಚು ಪಡಬೇಡಿರಿ, ಅವನ ನಡತೆಯನ್ನು ಎಷ್ಟು ಮಾತ್ರಕ್ಕೂ ಅನುಸರಿಸಬೇಡಿರಿ. ವಕ್ರಬುದ್ಧಿಯವನು ದೇವರಿಗೆ ಅಸಹ್ಯನು, ಸತ್ಯಸಂಧರು ಆತನಿಗೆ ಪ್ರೀತಿಪಾತ್ರರು. ದುರುಳರ ಮನೆಯನ್ನು ದೇವರು ಶಪಿಸುವನು; ನೀತಿವಂತರ ನಿವಾಸವನ್ನು ಆತ ಆಶೀರ್ವದಿಸುವನು. ಜ್ಞಾನಿಗಳಿಗೆ ಲಭಿಸುವುದು ಸನ್ಮಾನ; ಜ್ಞಾನಹೀನರಿಗೆ ಸಿಗುವ ಸಂಭಾವನೆ ಅವಮಾನ.**

***July 1***

- ದೇವರು ನಮಗೆ ಕೊಡುವುದು ಒಂದು ಮುಖ; ನಾವು ಮಾಡಿಕೊಳ್ಳುವುದು ಮತ್ತೊಂದು ಮುಖ
- ❖ A generous heart will quickly become a precious heart

***July 2***

- ಪ್ರಶಸ್ತಿಗಳನ್ನು ಪಡೆಯುವುದು ದೊಡ್ಡತನವಲ್ಲ. ಆ ಪ್ರಶಸ್ತಿಗಳಿಗೆ ನಾವೆಷ್ಟು ಅರ್ಹರು ಎಂಬುದನ್ನು ತಿಳಿಯುವುದು ದೊಡ್ಡತನ
- ❖ The one who knows how to adjust is the one who knows how to survive

***July 3 : St. Thomas, Apostle of India***

- ಊಟಮಾಡುವುದು ನಿನ್ನ ತೃಪ್ತಿಗಾಗಿ; ಉಡುಪು ಧರಿಸುವುದು ಅನ್ಯರ ತೃಪ್ತಿಗಾಗಿ
- ❖ Prayer is the best diet for everyone

***July 4 : Death of madam Mary Curie***

- ಶಿಕ್ಷಣವೆಂದರೆ ಬರೀ ಓದಲ್ಲ, ಬರೀ ಪುಸ್ತಕ ಜ್ಞಾನವೂ ಅಲ್ಲ. ಅದು ಮಾನವತೆಯ ವಿಕಾಸ
- ❖ An opportunist sees an opportunity in every calamity; a pessimist sees a calamity in every opportunity

***July 5***

- ಹಣವನ್ನು ಸಾಲವಾಗಿ ಪಡೆಯುವವರು, ಹಣದ ಜೊತೆಗೆ ಸಂಕಟವನ್ನೂ ಪಡೆಯುತ್ತಾರೆ

❖ If a person cannot find peace within oneself, can there be peace elsewhere?

***July 6***

- ದುಃಖ ಬಂದಾಗ ಮಾತ್ರ ಪರಮಾತ್ಮನ ನೆನಪು ಮಾಡಬೇಡ, ಸುಖ ಇರುವಾಗ ಅದನ್ನು ಅನುಭವಿಸುವ ಸಡಗರದಲ್ಲಿ ಪರಮಾತ್ಮನನ್ನು ಮರೆಯಬೇಡ

❖ Of all the pleasures on the earth, the company of the good person is the best

***July 7***

- ಶಾಂತ ಸ್ವಭಾವ ಯಾರಲ್ಲಿ ಕಂಡುಬರುವುದಿಲ್ಲವೊ ಅವರು ಎಂದಿಗೂ ಸುಖದಿಂದಿರಲು ಸಾಧ್ಯವಿಲ್ಲ

❖ Courtesy costs nothing but buys everything

***July 8***

- ಪರಿಸ್ಥಿತಿಗೆ ನೀನು ಹೊಂದಿಕೊಳ್ಳುವುದು ಜಾಣತನ, ಪರಿಸ್ಥಿತಿಯು ನಿನಗೆ ಹೊಂದಿಕೊಳ್ಳಬೇಕೆಂದು ತಿಳಿಯುವುದು ಮೂರ್ಖತನ

❖ Children are like wet cement; whatever falls on them makes an impression

***July 9***

- ತನ್ನ ತಪ್ಪನ್ನು ಒಪ್ಪಿಕೊಂಡು, ಆ ತಪ್ಪನ್ನು ತಿದ್ದಿಕೊಳ್ಳುವವನು ಬದುಕಿನಲ್ಲಿ ಯಶಸ್ಸನ್ನು ಕಾಣುವನು

❖ Give a man a fish and you feed him for a day; teach a man how to fish and you feed him for ever

***July 10 : First Communication Satellite***

- ಹೊಸದನ್ನು ತಿಳಿಯಬೇಕೆನ್ನುವ ಆಸೆ ನಿಮಗಿದ್ದರೆ ಇಡೀ ಲೋಕವೇ ನಿಮಗೆ ನಮಿಸುತ್ತದೆ

